ಶ್ರೀ ಶಂಕರಭಾಷ್ಯವಿಚಾರ

ರೇಡಿಯೋ ಭಾಷಣ
6-5-1965

ಶ್ರೀ ವಿಶ್ವಾವಸು ಸಂ. ವೈಶಾಖ ಶುದ್ಧ ಪಂಚಮೀ ಗುರುವಾರ
ಶ್ರೀಶಂಕರಜಯಂತೀ ಪ್ರಾತಃಕಾಲ

ಲೇಖಕರು :
ವೇ|| ಬ್ರ|| ಶ್ರೀ|| ಶ್ರೀನಿವಾಸಮೂರ್ತಿಗಳು,
ಆರ್. ನುಲೇನೂರು.

ಪ್ರಕಾಶಕರು :
ಅಧ್ಯಾತ್ಮಪ್ರಕಾಶಶಾಖಾಕಾರ್ಯಾಲಯ,
ತ್ಯಾಗರಾಜನಗರ, ಬೆಂಗಳೂರು-28.
1985

ಬಿನ್ನಹ

ವೇ॥ ಬ್ರ॥ ಶ್ರೀ॥ ಪೂಜ್ಯ ನೂಲೇನೂರು ಶ್ರೀನಿವಾಸಮೂರ್ತಿಗಳವರು ಹಿಂದೆ ಬೆಂಗಳೂರು ಹಾಗೂ ಭದ್ರಾವತಿಗಳ ಆಕಾಶವಾಣಿಯಿಂದ 1965 ನೆಯ ಶಂಕರಜಯಂತಿಯಲ್ಲಿ ಮಾಡಿದ್ದ ಭಾಷಣದ ವಿಷಯಗಳನ್ನು ತಮ್ಮ ಪ್ರವಚನಗಳಲ್ಲಿ ಪ್ರಸ್ತಾಪಿಸಿದಾಗ ಅನೇಕ ಭಕ್ತಮಹನೀಯರು ಇದು ಒಂದು ಚಿಕ್ಕಪುಸ್ತಕರೂಪದಲ್ಲಿ ಹೊರಬರಬೇಕೆಂದು ಸೂಚಿಸಿದರು. ಅದರಂತೆ ಈ ಪುಸ್ತಿಕೆಯನ್ನು ಹೊರತರಲಾಗಿದೆ.

ಬಳ್ಳಾರಿ ಜಿಲ್ಲಾ ಹೊಸಪೇಟೆಯ ನಾರಾಯಣದೇವರಕೆರೆಯ ಶಂಕರಜಯಂತೀಸಭೆಯವರು ಈ ಹೊತ್ತಗೆಯನ್ನು 1965 ರಲ್ಲೇ ಪ್ರಕಾಶಗೊಳಿಸಿದ್ದರು. ಆದರೆ ಆ ಗ್ರಂಥದ ಪ್ರತಿಗಳು ಪೂರೈಸಿಹೋಗಿದ್ದವಾದ್ದರಿಂದ 1977 ರಲ್ಲಿ ಅಚ್ಚಿನ ತಪ್ಪುಗಳನ್ನು ಶೋಧಿಸಿ ಕಾರ್ಯಾಲಯದ ಮೂಲಕ ಎರಡನೆಯ ಬಾರಿಗೆ ಪ್ರಕಟಿಸಲಾಗಿತ್ತು. ಈಗ ಮತ್ತೊಮ್ಮೆ ಮಹಾಜನರ ಕೋರಿಕೆಯಂತೆ ಮೂರನೆಯ ಬಾರಿಗೆ ಪ್ರಕಟಿಸಲಾಗಿದೆ. ಮಹಾಜನರು ಇದರ ಪ್ರಯೋಜನವನ್ನು ಪಡೆದುಕೊಳ್ಳುವರೆಂದು ಆಶಿಸಿದೆ.

ಇತಿ,

ತಾ॥ 15-6-1985 ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ,
ಹೊಳೆನರಸೀಪುರ. ಕಾರ್ಯದರ್ಶಿ,
ಅಧ್ಯಾತ್ಮಪ್ರಕಾಶಕಾರ್ಯಾಲಯ.



ದಿವಂಗತ ಶ್ರೀ ಲಕ್ಷ್ಮಣಸಾ ಖೋಡೆ
ಶ್ರೀಮತಿ ಗಂಗಮ್ಮ ಲಕ್ಷ್ಮಣಸಾ ಖೋಡೆ ಇವರುಗಳು

॥ ಓಂ ॥



ಶ್ರೀ ಶಂಕರಭಗವತ್ಪಾದರವರು

ಶ್ರೀ ಶಂಕರಭಾಷ್ಯದ ವಿಚಾರ

(ಲೇಖಕರು : ವೇ॥ಬ್ರ॥ಶ್ರೀ॥ ಪೂಜ್ಯ ಶ್ರೀನಿವಾಸಮೂರ್ತಿಗಳು, ಆರ್. ಸುಲೇನೂರು)
ಹೊಳಲ್ಕೆರೆ.

[ಶ್ರೀಶಂಕರಜಯಂತಿಪ್ರಯುಕ್ತ ತಾ॥ 6-5-1965 ರಂದು ಆಲ್ ಇಂಡಿಯಾ ರೇಡಿಯೋ, ಬೆಂಗಳೂರು ಭದ್ರಾವತಿಗಳಿಂದ ಪ್ರಸಾರವಾದ ಭಾಷಣವಿದು. ಆಕಾಶವಾಣಿಯ ಕಾರ್ಯನಿರ್ವಾಹಕರ ಕೃಪೆಯಿಂದ.]

ಶೃಣ್ವಂತು ವಿಶ್ವೇ ಅಮೃತಸ್ಯ ಪುತ್ರಾಃ !

1. ಅಮೃತಸ್ವರೂಪನಾದ ಪರಮಾತ್ಮನ ಎಲ್ಲ ಮಕ್ಕಳಿರಾ ! ಕೇಳಿರಿ ! ಹೀಗೆಂದು ವೇದಪುರುಷನು ಜಗತ್ತಿನ ಸಕಲಜೀವರನ್ನೂ ಕುರಿತು ಕರುಣೆಯಿಂದ ಸಂಬೋಧಿಸಿದ್ದಾನೆ. ಕುಕ್ಕುಟಾಂಡದಲ್ಲಿರುವದು ಕುಕ್ಕುಟವೇ ಆಗಿರುವಂತೆ ಬ್ರಹ್ಮಾಂಡದಲ್ಲಿರುವುದೆಲ್ಲ ಬ್ರಹ್ಮವೇ ಆಗಿದೆ ಎಂಬಿದು ಸ್ವಾಭಾವಿಕ. ಹೀಗೆಯೇ ಪರಮಾತ್ಮನ ಮಕ್ಕಳಾದ ನೀವೆಲ್ಲರೂ ಪರಮಾತ್ಮಸ್ವರೂಪರೇ ಆಗಿದ್ದೀರಿ-ಎಂದು ವೇದಪುರುಷನು ತನ್ನ ಈ 'ಅಮೃತಸ್ಯ ಪುತ್ರಾಃ' ಎಂಬೊಂದು ಸಂಬೋಧನೆಯಲ್ಲಿಯೇ ವೇದದ ಸಾರವನ್ನೆಲ್ಲ ಬೋಧಿಸಿದ್ದಾನೆ.

2. ಈ ಅರ್ಥವನ್ನೇ ಉಪನಿಷತ್ತಿನಲ್ಲಿ 'ಸರ್ವಂ ಖಲ್ವಿದಂ ಬ್ರಹ್ಮ' ಈ ಸರ್ವವೂ ಬ್ರಹ್ಮವೇ, 'ತತ್ತ್ವಮಸಿ' ಆ ಬ್ರಹ್ಮವೇ ನೀನಾಗಿದ್ದೀಯೆ-ಮುಂತಾದ ವಾಕ್ಯಗಳಿಂದ ಉಪದೇಶಿಸಿ 'ನಾನು ಸಂಸಾರಿ' ಎಂಬಿದು ತಪ್ಪುತಿಳಿವಳಿಕೆಯೆಂದೂ ಇದರಿಂದಲೇ ಎಲ್ಲಾ ಅನರ್ಥಗಳೂ ಉಂಟಾಗಿರುವವೆಂದೂ ತಿಳಿಸಿರುತ್ತದೆ.

3. ಈ ವೇದೋಪನಿಷತ್ತುಗಳೂ ಬ್ರಹ್ಮಸೂತ್ರಗಳೂ ಭಗವದ್ಗೀತೆಯೂ ನಮ್ಮ ವೇದಧರ್ಮಕ್ಕೆ ಪರಮ ಪ್ರಮಾಣವಾದ ಮಹಾಗ್ರಂಥಗಳು. ಇವುಗಳಿಗೆ ಪ್ರಸ್ಥಾನತ್ರಯ- ಎಂದು ಹೆಸರು. ಪೂಜ್ಯರಾದ ಶಂಕರಭಗವತ್ಪಾದಾಚಾರ್ಯರು ಈ ಪ್ರಸ್ಥಾನತ್ರಯಗಳ ಮೇಲೆ ಭಾಷ್ಯಗಳನ್ನು ಬರೆದಿದ್ದಾರೆ. ಅವರು ತೈತ್ತಿರೀಯೋಪನಿಷತ್ತಿನ ಭಾಷ್ಯದ ಅವತರಣಿಕೆಯಲ್ಲಿ :

"ಯೈರಿಮೇ ಗುರುಭಿಃ ಪೂರ್ವಂ ಪದವಾಕ್ಯಪ್ರಮಾಣತಃ |
ವ್ಯಾಖ್ಯಾತಾಃ ಸರ್ವವೇದಾನ್ತಾಸ್ತಾನ್ನಿತ್ಯಂ ಪ್ರಣತೋಽಸ್ಮ್ಯಹಮ್" ||

'ಯಾವ ಗುರುಗಳಿಂದ ಈ ಮೊದಲು ಈ ಉಪನಿಷತ್ತುಗಳೆಲ್ಲವೂ ಪದವಾಕ್ಯ ಪ್ರಮಾಣಗಳನ್ನನುಸರಿಸಿ-ಅಂದರೆ ವ್ಯಾಕರಣ, ಮೀಮಾಂಸಾ, ನ್ಯಾಯಶಾಸ್ತ್ರಗಳ ಸಹಾಯದಿಂದ-ವಿವರಿಸಲ್ಪಟ್ಟಿರುವವೋ ಅವರನ್ನು ನಾನು ನಿತ್ಯವೂ ನಮಸ್ಕರಿಸುವೆನು'-ಎಂದು ಹೇಳಿದ್ದಾರೆ.

4. ಶ್ರೀ ಶಂಕರಾಚಾರ್ಯರು ಕೇರಳದೇಶದಲ್ಲಿ ಹುಟ್ಟಿ ಎಂಟು ವರ್ಷಕ್ಕೆ ಸಂನ್ಯಾಸವನ್ನು ಸ್ವೀಕಾರಮಾಡಿ, ಆತ್ಮಾನುಭವವನ್ನು ಪಡೆದು ತಮ್ಮ ಹದಿನಾರನೆಯ ವಯಸ್ಸಿನಲ್ಲಿಯೇ ವೇದಾಂತಗಳಿಗೆಲ್ಲಾ ಭಾಷ್ಯವನ್ನು ಬರೆದರು.

ಅಷ್ಟವರ್ಷೇ ಚತುರ್ವೇದಾನ್ ದ್ವಾದಶೇ ಸರ್ವಶಾಸ್ತ್ರವಿತ್ । ಷೋಡಶೇ ಕೃತವಾನ್ ಭಾಷ್ಯಮ್ '॥–ಎಂಬ ವಾಕ್ಯದಂತೆ ಈ ವಿಷಯವು ಸಿದ್ಧವಾಗುತ್ತದೆ. ಮಹಾವಿಭೂತಿಪುರುಷರಾದ ಶಂಕರಾಚಾರ್ಯರು ತಮ್ಮ ಎಂಟನೆಯ ವಯಸ್ಸಿನಲ್ಲಿ ನಾಲ್ಕು ವೇದಗಳಲ್ಲಿಯೂ ಹನ್ನೆರಡನೆಯ ವಯಸ್ಸಿನಲ್ಲಿ ತರ್ಕಮೀಮಾಂಸಾದಿ ಸಕಲಶಾಸ್ತ್ರಗಳಲ್ಲಿಯೂ ಪಾರಂಗತರಾದುದಲ್ಲದೆ ಹದಿನಾರನೆಯ ವಯಸ್ಸಿನಲ್ಲಿಯೇ ಪ್ರಸ್ಥಾನತ್ರಯಭಾಷ್ಯಗಳನ್ನೂ ರಚಿಸಿದರು ! ಪರಮಾತ್ಮನು ಈ ವಿಚಿತ್ರವಾದ ಜಗತ್ತನ್ನು ಸೃಷ್ಟಿಸಿರುವುದೇ ಆಶ್ಚರ್ಯವಾದರೆ ಈ ಭವದುಃಖದಿಂದ ಮುಕ್ತಿಯನ್ನು ಪಡೆಯಲು ಹದಿನಾರುವರ್ಷದ ಬಾಲಕನು ಸೃಷ್ಟಿಸಿದ ಈ ಭಾಷ್ಯವು ಮೊಟ್ಟಮೊದಲಿನ ಪರಮಾಶ್ಚರ್ಯವೇ ಸರಿ ! ಎನ್ನಬಹುದು.

5. ಅವರು ತಮ್ಮ ಭಾಷ್ಯಗಳಲ್ಲಿ ಮಾಡಿರುವ ತತ್ತ್ವನಿರೂಪಣೆಯು ಅತ್ಯಂತ ಪ್ರಸನ್ನವೂ ಗಂಭೀರವೂ ಆಗಿದೆ. ಅವರ ಭಾಷಾಶೈಲಿಯು ಸ್ವಾಭಾವಿಕವಾಗಿಯೇ ಸುಂದರವೂ ಸುಲಲಿತವೂ ಆಗಿದೆ. ಶಿವ, ವಿಷ್ಣು–ಮೊದಲಾದ ದೇವತಾವಿಶೇಷಗಳಲ್ಲಿ ಯಾವುದೊಂದನ್ನೂ ಸರ್ವೋತ್ತಮವೆಂದು ಸಾಧಿಸುವ ವಾದದಲ್ಲಿ ತೊಡಗದೆ ಉಪನಿಷತ್ತುಗಳಲ್ಲಿ ಪ್ರಸಿದ್ಧವಾಗಿರುವ ಪರಬ್ರಹ್ಮವನ್ನೇ ಪರಮಾರ್ಥಸತ್ಯವೆಂದು ಸಿದ್ಧಾಂತಮಾಡಿದ್ದಾರೆ. ವೇದಮತಕ್ಕೆ ವಿರೋಧಿಗಳಾದ ಚಾರ್ವಾಕಬೌದ್ಧಾದಿಮತಗಳ ವಾದಗಳಲ್ಲಿಯೂ ಅದ್ವೈತಮತಕ್ಕೆ ವಿರೋಧಿಗಳಾದ ಸಾಂಖ್ಯವೈಶೇಷಿಕ,ಯೋಗ-ಮುಂತಾದ ದರ್ಶನಗಳಲ್ಲಿಯೂ ಇರುವ ಗುಣಗಳನ್ನು ಗ್ರಹಿಸಿ ನ್ಯೂನತೆಗಳನ್ನು ತೋರಿಸಿಕೊಟ್ಟು ಪ್ರಬಲತರವಾದ ಯುಕ್ತಿಗಳಿಂದ, ಆ ವಾದಗಳನ್ನು ಖಂಡಿಸಿ ಅನಾದಿಯಾದ ಅದ್ವೈತಮತವನ್ನು ಶ್ರುತಿ, ಯುಕ್ತಿ, ಅನುಭವಗಳ ಆಧಾರದಿಂದ ಸುಭದ್ರವಾಗಿ ಸ್ಥಾಪಿಸಿದ್ದಾರೆ.

6. ಅವರು ತಮ್ಮ ಬ್ರಹ್ಮಸೂತ್ರಭಾಷ್ಯದಲ್ಲಿ 'ಪರಮತಮ್ ಅಪ್ರತಿಷಿದ್ಧಮ್ ಅನುಮತಂ ಭವತಿ ।' ತನ್ನ ಮತಕ್ಕೆ ವಿರುದ್ಧವಲ್ಲದ ಪರಮತವಾದಗಳಲ್ಲಿರುವ ಮುಖ್ಯವಿಷಯುಗಳೆಲ್ಲವೂ ತಮಗೆ ಸಮ್ಮತವೇ ಆಗಿವೆ–ಎಂದಿದ್ದಾರೆ. ಇದರಿಂದ ಶಂಕರರು ತಮ್ಮ ಸಿದ್ಧಾಂತಮಂಡನೆಗೆ ಬಹುವಿಶಾಲವಾದ ಭೂಮಿಕೆಯನ್ನು ನಿರ್ಮಿಸಿಕೊಂಡು ಉದಾತ್ತಭಾವದಿಂದ ಮುನ್ನಡಿಯಿಟ್ಟಿದ್ದಾರೆಂಬುದು ಸ್ಪಷ್ಟವಾಗುತ್ತದೆ.

7. ಆಚಾರ್ಯರು ಖಂಡನೆಗೆಂದು ಅನುವಾದಮಾಡಿಕೊಂಡಿರುವ ಎಲ್ಲಾ ವೇದಾಂತಿಗಳೂ ಮುಕ್ತಿಯಲ್ಲಿ ಅದ್ವೈತವನ್ನೇ ಒಪ್ಪಿದವರಾಗಿರುತ್ತಾರೆ.

ರಾಮಾನುಜಾದಿದ್ವೈತಿವೇದಾಂತಿಗಳ ಮತವನ್ನು ಅವರು ಎಲ್ಲಿಯೂ ಉದಾಹರಿಸಿಯೇ ಇರುವದಿಲ್ಲ. ಇದರಿಂದ ಆಚಾರ್ಯರಿಗಿಂತ ಹಿಂದೆ ಅಥವಾ ಅವರ ಕಾಲದಲ್ಲಿ ಅದ್ವೈತಸಂಪ್ರದಾಯಕ್ಕಿಂತ ಬೇರೆಯಾದ ವೇದಾಂತಸಂಪ್ರದಾಯವಿತ್ತೆಂದು ಹೇಳಲಾಗುವದಿಲ್ಲ.

8. ಹೀಗೆ ಅನೇಕವಾದಿಗಳ ಮತ್ತು ಭಾಷ್ಯಗಳ ಗೊಂದಲವು ಹೆಚ್ಚಾಗಿ ವೇದಾಂತದ ನಿಜವೇನೆಂಬುದು ಯಾರಿಗೂ ಅರಿವಾಗದಂತೆ ಜಿಜ್ಞಾಸುಗಳು ತೊಳಲಾಡುತ್ತಿದ್ದಾಗ, ಭಾರತೀಯರ ಅಧ್ಯಾತ್ಮಸಂಸ್ಕೃತಿಯ ಸೌಭಾಗ್ಯವೇ ಶಂಕರಾಚಾರ್ಯರ ರೂಪದಿಂದ ಅವತರಿಸಿತು-ಎನ್ನಬಹುದು. ಅವರು ಆಗಿನ ಕಾಲದಲ್ಲಿದ್ದ ವೇದಾಂತವಿಚಾರಪ್ರಪಂಚದಲ್ಲಿಯೇ ಒಂದು ಮಹಾಕ್ರಾಂತಿಯನ್ನುಂಟುಮಾಡಿದರು. ಅದೇನೆಂದರೆ: ಎಲ್ಲರೂ ಮರೆತಿದ್ದ ಒಂದು ಅಮೋಘತತ್ತ್ವವನ್ನು ಶಂಕರರು ಜಿಜ್ಞಾಸುಗಳ ಮುಂದೆ ಮಂಡಿಸಿದರು. ಅವರು ಸೂತ್ರಭಾಷ್ಯದಲ್ಲಿ ಹೇಳಿರುವದೇನೆಂದರೆ: 'ನ ಧರ್ಮಜಿಜ್ಞಾಸಾಯಾಮಿವ ಶ್ರುತ್ಯಾದಯ ಏವ ಪ್ರಮಾಣಂ ಬ್ರಹ್ಮಜಿಜ್ಞಾಸಾಯಾಮ್। ಕಿಂ ತು, ಶ್ರುತ್ಯಾದಯೋ ಅನುಭವಾದಯಶ್ಚ ಯಥಾಸಂಭವಮ್ ಇಹ ಪ್ರಮಾಣಮ್ | ಅನುಭವಾವಸಾನತ್ವಾದ್ ಭೂತವಸ್ತುವಿಷಯತ್ವಾಚ್ಚ ಬ್ರಹ್ಮಜ್ಞಾನಸ್ಯ ॥' (ಸೂ. ಭಾ. ೧-೧-೨)

9. ಧರ್ಮಜಿಜ್ಞಾಸೆಯಲ್ಲಿ ಕರ್ಮಗಳಿಗೆ ಆಗುವ ಸ್ವರ್ಗಾದಿ ಅದೃಷ್ಟ ಫಲಗಳನ್ನು ಹೇಳಿರುವದರಿಂದ ಅದಕ್ಕೆ ಶ್ರುತ್ಯಾದಿಗಳೇ ಪ್ರಮಾಣವು. ಆದರೆ ಬ್ರಹ್ಮಜಿಜ್ಞಾಸೆಯಲ್ಲಿ ಹೀಗಲ್ಲ. ಇದರಲ್ಲಿ ಪರಲೋಕದಲ್ಲಾಗುವ ಉಪಾಸನಾಫಲಗಳನ್ನು ಹೇಳಿದ್ದರೂ, ಬ್ರಹ್ಮಜ್ಞಾನದಿಂದ ಈಗಲೇ ಅನುಭವಕ್ಕೆ ಬರುವ ದೃಷ್ಟಫಲವನ್ನೇ ಮುಖ್ಯವಾಗಿ ಹೇಳಿದೆ. ಆದ್ದರಿಂದ ಇಲ್ಲಿ ಬರಿಯ ಶಾಸ್ತ್ರಾದಿಗಳೇ ಪ್ರಮಾಣವಲ್ಲ. ಆಯಾ ಸಂದರ್ಭಕ್ಕೆ ಹೊಂದುವಂತೆ ಶ್ರುತ್ಯಾದಿಗಳೂ ಅನುಭವಾದಿಗಳೂ ಪ್ರಮಾಣವಾಗಿರುತ್ತವೆ. ಏಕೆಂದರೆ ಬ್ರಹ್ಮಜ್ಞಾನವು ಅನುಭವದಲ್ಲಿ ಕೊನೆಗಾಣತಕ್ಕದ್ದಾಗಿದೆ. ಮತ್ತು ಅದಕ್ಕೆ, ಮೊದಲೇ ಸಿದ್ಧವಾಗಿರುವ ಪರಮಾತ್ಮವಸ್ತುವೇ ವಿಷಯವಾಗಿರುತ್ತದೆ.

10. ಮತ್ತೆ ಅವರು ಬ್ರಹ್ಮಸೂತ್ರಭಾಷ್ಯದಲ್ಲಿ ಹೇಳಿರುವದೇನೆಂದರೆ: "ಕರ್ಮಫಲೇ ಹಿ ಸ್ವರ್ಗಾದೌ ಅನುಭವಾನಾರೂಢೇ ಸ್ಯಾದಾಶಙ್ಕಾ ಭವೇದ್ವಾ ನ ವಾ ಇತಿ। ಅನುಭವಾರೂಢಂ ತು ಜ್ಞಾನಫಲಂ.... 'ತತ್ತ್ವಮಸಿ' ಇತಿ ಚ ಸಿದ್ಧವತ್ ಉಪದೇಶಾತ್ ॥" ಸ್ವರ್ಗಾದಿಕರ್ಮಫಲಗಳು ನಿಜವಾಗಿ ಆಗುವವೋ ಇಲ್ಲವೋ-ಎಂಬ ಶಂಕೆಯು ಉಂಟಾದರೂ ಆಗಬಹುದು. ಏಕೆಂದರೆ ಆ ಫಲವು ಈಗ ಅನುಭವಕ್ಕೆ ಬರುವದಿಲ್ಲ. ಆದರೆ ವೇದಾಂತವಾಕ್ಯಜನ್ಯವಾದ ಜ್ಞಾನಫಲವು ಈಗಲೇ ಅನುಭವಕ್ಕೆ ಬರುವದರಿಂದ ಅದರ ವಿಷಯಕ್ಕೆ ಇಂಥಾ ಶಂಕೆಯುಂಟಾಗಲು ಕಾರಣವಿರುವದಿಲ್ಲ. (ಸೂ. ಭಾ. ೩-೩-೩೨)

11. ಅವರು ಅನುಭವಕ್ಕೇ ಅತ್ಯಂತ ಮಹತ್ವವನ್ನು ಕೊಟ್ಟು ಹೇಳಿರುವದೇನೆಂದರೆ: 'ನ ಹಿ ಪ್ರತ್ಯಕ್ಷವಿರೋಧೇ ಶ್ರುತೇಃ ಪ್ರಾಮಾಣ್ಯಮ್ । ನ ಹಿ ಶ್ರುತಿಶತಮಪಿ 'ಶೀತೋಽಗ್ನಿಃ ಅಪ್ರಕಾಶೋ ವಾ' ಇತಿ ಬ್ರುವತ್ ಪ್ರಾಮಾಣ್ಯಮುಪೈತಿ । (ಗೀ. ಭಾ. ೧೮-೬೬). ಸಾರ್ವತ್ರಿಕವೂ ಸಾಮಾನ್ಯವೂ ಆದ ಪ್ರತ್ಯಕ್ಷಾನುಭವಕ್ಕೆ ವಿರುದ್ಧವಾಗಿ ಶ್ರುತಿಯು ಹೇಳಿದರೂ ಪ್ರಮಾಣವಾಗಲಾರದು. "ಬೆಂಕಿಯು ತಣ್ಣಗಿದೆ. ಅದರಲ್ಲಿ ಬೆಳಕಿಲ್ಲ" ಎಂದು ನೂರು ಶ್ರುತಿ ವಚನಗಳು ಹೇಳಿದರೂ ಪ್ರಮಾಣವಾಗಲಾರದು. ಏಕೆಂದರೆ ಶಾಸ್ತ್ರವು ಪ್ರತ್ಯಕ್ಷಕ್ಕೆ ವಿರೋಧಿಯೇನೂ ಅಲ್ಲ.

12. "ಶ್ರುತಿಶ್ಚ ನಃ ಪ್ರಮಾಣಂ ಅತೀಂದ್ರಿಯವಿಷಯವಿಜ್ಞಾನೋತ್ಪತ್ತೌ" (ಸೂ. ಭಾ. ೨-೩-೧). ಇಂದ್ರಿಯಗಳಿಗೂ ಮನಸ್ಸಿಗೂ ಮೀರಿದ, ಅವಕ್ಕೆ ನಿಲುಕದಿರುವ ಸತ್ಯದ ಅರಿವನ್ನು ಉಂಟುಮಾಡಿಕೊಡುವದಕ್ಕಾಗಿಯೇ ಶಾಸ್ತ್ರವಿರುವದು. 'ಶಾಸ್ತ್ರತ್ವೇನ ಶಾಸ್ತ್ರಂ ಹಿ ನ ಪ್ರಮಾಣಮ್ । ಅನುಭವಗಮ್ಯತ್ವಾತ್ ಶಾಸ್ತ್ರಸ್ಯ ಪ್ರಾಮಾಣ್ಯಮ್ ।' ಶಾಸ್ತ್ರವೆಂಬುದರಿಂದಲೇ ಶಾಸ್ತ್ರವು ಪ್ರಮಾಣವಾಗಲಾರದು. ಅನುಭವಗಮ್ಯವಾದುದರಿಂದಲೇ ಶಾಸ್ತ್ರವು ಪ್ರಮಾಣವಾಗಿದೆ–ಎಂಬುದು ಆಚಾರ್ಯರ ನಿಲುವು.

13. ಹಾಗೆಯೇ 'ಶ್ರುತಿವಿರೋಧೇ ನ್ಯಾಯಾಭಾಸತ್ವೋಪಗಮಾತ್' ಶ್ರುತಿಯು 'ಸರ್ವಂ ಖಲ್ವಿದಂ ಬ್ರಹ್ಮ' (ಈ ಎಲ್ಲವೂ ಬ್ರಹ್ಮವೇ) ಎಂದು ಹೇಳಿದರೆ ಪ್ರತ್ಯಕ್ಷವಾಗಲಿ ಅನುಮಾನವಾಗಲಿ (ಇಂದ್ರಿಯಗಳಾಗಲಿ ಬುದ್ಧಿಯಾಗಲಿ) ಅದನ್ನು ವಿರೋಧಿಸುವದಕ್ಕೆ ಅಧಿಕಾರವೇ ಇಲ್ಲ. ಏಕೆಂದರೆ ಶ್ರುತಿಯು ಹೇಳುವ ಅತೀಂದ್ರಿಯವಾದ ಅನುಭವವು ಇಂದ್ರಿಯಗಳಿಗೂ ಬುದ್ಧಿಗೂ ನಿಲುಕುವ ವಿಷಯವಲ್ಲ. (ಬೃ. ೪-೩-೨೨) (Any reasoning that contradicts Sruthi is a fallacy).

14. ಶ್ರುತಿಯು ನೆನಪುಕೊಡುತ್ತಿರುವ ಸ್ವರೂಪದ ಅನುಭವವು ಎಲ್ಲರಲ್ಲಿಯೂ ಸ್ವಭಾವಸಿದ್ಧವಾಗಿ, ಯಾವ ಬದಲಾವಣೆಯನ್ನೂ ಹೊಂದದೆ, ಏಕರೂಪವಾಗಿ, ಯಾವಾಗಲೂ ಇದ್ದುಬಿಟ್ಟಿದೆ- ಎಂದು ಶಂಕರರು ಹೇಳಿದ್ದಾರೆ. ಆದ್ದರಿಂದ ಇದು ಸಾರ್ವತ್ರಿಕವೂ ಸಾಮಾನ್ಯವೂ (ನಿರ್ವಿಶೇಷವೂ) ಆದುದು. ಇಷ್ಟೇ ಅಲ್ಲ. ಈ ಅನುಭವಸ್ವರೂಪವು ಪರಿಪೂರ್ಣವೂ ಆದುದು. ಹೇಗೆಂದರೆ: ಇದು ಸಮಸ್ತಜ್ಞೇಯಗಳ (ಅಂದರೆ ಜ್ಞಾತೃ, ಜ್ಞಾನ, ಜ್ಞೇಯಗಳ ಅಥವಾ ಪ್ರಮಾತೃ, ಪ್ರಮಾಣ, ಪ್ರಮೇಯಗಳ) ತೋರಿಕೆಯನ್ನೂ ಅಡಗುವಿಕೆಯನ್ನೂ ಪ್ರಯತ್ನವಿಲ್ಲದೆ, ನಿರ್ವಿಕಾರವಾಗಿ ಬೆಳಗುವ ಸಾಕ್ಷಿಚೈತನ್ಯವಾಗಿದೆ.

'ಸರ್ವೋಪನಿಷತ್ತುಗಳೂ ತಿಳಿಸಲು ಹೊರಟಿರುವ 'ಔಪನಿಷದಪುರುಷನೇ' ಈ ಸಾಕ್ಷಿಚೈತನ್ಯ. ಭಗವದ್ಗೀತೆಯಲ್ಲಿ ಭಗವಂತನು ಹೇಳಿರುವ "ಪುರುಷೋತ್ತಮ"ನೂ ಇದೇ.

15. ಹೀಗೆ ಪರೀಕ್ಷಾಪ್ರಯೋಗಗಳಿಂದ ಕೂಡಿದ ಅನುಭವವೇ ಪ್ರಧಾನವಾದ ವಿಚಾರಕ್ಕೇ ಆಧುನಿಕರು 'Scientific Spirit' ವೈಜ್ಞಾನಿಕಮನೋಧರ್ಮ- ಎನ್ನುವುದು. ಆಧುನಿಕವಿಜ್ಞಾನಿಗಳು ತುಂಬಾ ಮೆಚ್ಚಿಕೊಳ್ಳುವ ಈ ವಿಚಾರವೈಖರಿಯು ಹನ್ನೆರಡುಶತಮಾನಗಳ ಹಿಂದೆಯೇ ಶಂಕರರಲ್ಲಿ ತುಂಬಿ ತುಳುಕುತ್ತಿದ್ದುದನ್ನು ಯಾರಾದರೂ ಕಾಣಬಹುದು. ಮೀಮಾಂಸಕರಂತೆಯೇ ಅವರು ಶ್ರುತಿಪ್ರಾಮಾಣ್ಯವನ್ನು ಒಪ್ಪಿದ್ದರೂ ಕೂಡ ದೇವತೆಗಳ ವಿಷಯದಲ್ಲಿ ಅವರಿಗೆ ವೃಥಾಭಿಮಾನ-ಅಭಿನಿವೇಶಗಳಿರಲಿಲ್ಲ.

16. ವೇದಗಳಲ್ಲೆಲ್ಲ ಇರುವ 'ಅಯಮಾತ್ಮಾ ಬ್ರಹ್ಮ' ಎಲ್ಲರ ಈ ಆತ್ಮನೇ ಸ್ವರೂಪತಃ ಬ್ರಹ್ಮನಾಗಿದ್ದಾನೆ-ಎಂಬ ಈ ಒಂದು ಸತ್ಯವನ್ನು ಎಲ್ಲರೂ ನಂಬಬೇಕಾದುದು. ಇದನ್ನು ಅನುಭವಕ್ಕೆ ತಂದುಕೊಳ್ಳುವುದಕ್ಕಾಗಿಯೇ ಎಲ್ಲಾ ಧರ್ಮಸಾಧನೆಗಳೂ ಬ್ರಹ್ಮವಿಚಾರವೂ ಇರುವುದು. ಆದರೆ ಈ ಅನುಭವವು ಇಂದ್ರಿಯಗಳಿಗೂ ತರ್ಕಕ್ಕೂ ಗೋಚರವಲ್ಲವಾದರೂ ಇದು ಅಪರೋಕ್ಷಾನುಭವದ ಪರಮಸತ್ಯ-ಎಂದು ಅವರು ಹೇಳಿದರು.

17. ಹಾಗಾದರೆ ಈ ಅನುಭವವನ್ನು ಪಡೆಯುವುದು ಹೇಗೆಂದರೆ : 'ಶಾಸ್ತ್ರಾಚಾರ್ಯೋಪದೇಶಶಮದಮಾದಿಸಂಸ್ಕೃತಂ ಮನಃ ಆತ್ಮದರ್ಶನೇ ಕರಣಮ್' ಆತ್ಮದರ್ಶನಮಾಡುವುದಕ್ಕೆ ಮನಸ್ಸೇ ಸಾಧನ. ಅಂತಃಕರಣವನ್ನು ಬಿಟ್ಟು ಇದಕ್ಕೆ ಬೇರೆ ಸಾಧನವು ಇಲ್ಲ. ಆದರೆ ಮಲಿನವೂ ಚಂಚಲವೂ ಆದ ಮನಸ್ಸಿಗೆ ಆ ಶಕ್ತಿಯಿಲ್ಲ. ಶಮದಮಾದಿಸಾಧನೆಗಳಿಂದಲೂ ಉಪಾಸನೆಯಿಂದಲೂ ಮನಸ್ಸು ನಿರ್ಮಲವೂ ನಿಶ್ಚಲವೂ ಆಗಿರಬೇಕು. ಇಂಥ ಮನಸ್ಸಿಗೆ ಶಾಸ್ತ್ರಗುರುಗಳಿಂದ ಉಪದೇಶವಾದರೆ ನಿಶ್ಚಿತವಾಗಿಯೂ ಬ್ರಹ್ಮಜ್ಞಾನವಾಗಿಯೇ ಆಗುತ್ತದೆ; ಇಂಥ ಉತ್ತಮಾಧಿಕಾರಿಗೆ ಜ್ಞಾನವಾಗುವುದಿಲ್ಲವೆಂಬುದಿಲ್ಲ-ಎಂದು ಶಂಕರರು ತಿಳಿಸಿದ್ದಾರೆ. ಏಕೆಂದರೆ ಅತ್ಯಂತದೂರದಲ್ಲಿರುವ ಗ್ರಹಗಳನ್ನೂ ನಕ್ಷತ್ರ-ನೀಹಾರಿಕೆಗಳನ್ನೂ ನೋಡಲು ಖಗೋಳಶಾಸ್ತ್ರಜ್ಞನಿಗಾದರೂ ಹೆಚ್ಚು ಹೆಚ್ಚು ಪ್ರಬಲವಾದ 'ಟೆಲೆಸ್ಕೋಪ್ಸ್' (ದೂರದರ್ಶಿಯಂತ್ರಗಳು) ಬೇಕಾಗುತ್ತವೆ. ಅವುಗಳನ್ನು ಬರಿಗಣ್ಣಿನಿಂದ ಕಾಣುವುದು ಯಾರಿಂದಲೂ ಸಾಧ್ಯವಲ್ಲ. ಹೀಗೆಯೇ ನಮ್ಮೆಲ್ಲರ ಹೃದಯದಲ್ಲಿರುವ ಅತ್ಯಂತಸೂಕ್ಷ್ಮವಾದ ಪ್ರತ್ಯಗಾತ್ಮನಾದ ಬ್ರಹ್ಮದ ಸ್ವರೂಪವನ್ನು ಕಾಣಲು ಸಾಧನವಾದ ಮನಸ್ಸಿಗೆ ವಿಶಿಷ್ಟವಾದ ಯೋಗ್ಯತೆಯು ಬೇಕಾಗುವುದು ಸ್ವಾಭಾವಿಕ.

18. ಹೊರಗಿನ ಜಗತ್ತಿನಲ್ಲಿ ಅಡಗಿರುವ ತತ್ತ್ವವನ್ನೂ ಶಕ್ತಿಯನ್ನೂ ಶೋಧಿಸಿ ಸ್ವಾಧೀನಪಡಿಸಿಕೊಳ್ಳುವುದೇ ಭೌತಿಕವಿಜ್ಞಾನದ ಉದ್ದೇಶವಾಗಿದೆ. ಆದರೆ ಮನುಷ್ಯನ ಒಳಗಿನ ಪ್ರಕೃತಿಯಲ್ಲಿ ಅಡಗಿರುವ ಇನ್ನೂ ಹೆಚ್ಚು ಆಶ್ಚರ್ಯಕರವಾದ ಸತ್ಯವನ್ನು ಸಂಶೋಧಿಸಿ ಅನುಭವಗೋಚರಪಡಿಸಿಕೊಳ್ಳುವುದೇ ಅಧ್ಯಾತ್ಮವಿಜ್ಞಾನದ ಉದ್ದೇಶವಾಗಿದೆ. ಅಧ್ಯಾತ್ಮಶಾಸ್ತ್ರರಹಸ್ಯವನ್ನು ಬೋಧಿಸುವದರಲ್ಲಿ ಶಂಕರರು ಅತ್ಯಂತಶ್ರೇಷ್ಠರಾದ ಆಚಾರ್ಯರೇ ಸರಿ ತತ್ತ್ವಪರೀಕ್ಷಾ, ಸತ್ತ್ವಪ್ರಯೋಗಗೆಳಿಂದ ಸತ್ಯವನ್ನು ಪ್ರಮಾಣೀಕರಿಸಿ ಇಲ್ಲಿಯೇ ಈಗಲೇ ಅನುಭವಕ್ಕೆ ತಂದುಕೊಳ್ಳಬಹುದೆಂದು ಶಂಕರರು ಹೇಳುತ್ತಾರೆ. ಅಧ್ಯಾತ್ಮಸಂಶೋಧನೆಯಲ್ಲಿ ನಮ್ಮ ನಮ್ಮ ಮನಸ್ಸೇ ಮಹಾಪ್ರಯೋಗಶಾಲೆಯು (Laboratory). ವಾಕ್ಯಾರ್ಥವಿಚಾರವೇ ತತ್ತ್ವಪರೀಕ್ಷೆ. ಶಮದಮಾದಿಗಳೂ ಶ್ರವಣಮನನಾದಿಗಳೂ ಪ್ರಯೋಗಸಾಧನೆಗಳು. ನಿದಿಧ್ಯಾಸನದ ಮೂಲಕ ಲಭಿಸುವ ನಿಜಾನಂದಾನುಭೂತಿಯೇ ಆತ್ಮವಿಜ್ಞಾನದ ಅಮೃತಫಲವು.

19. “ತತ್ತ್ವಜ್ಞಾನಂ ತು ವೇದಾಂತವಾಕ್ಯೇಭ್ಯ ಏವ ಭವತಿ। ವಾಕ್ಯಾರ್ಥವಿಚಾರಣಾಧ್ಯವಸಾನನಿರ್ವೃತ್ತಾ ಹಿ ಬ್ರಹ್ಮಾವಗತಿಃ, ನಾನುಮಾನಾದಿಪ್ರಮಾಣಾಂತರನಿರ್ವೃತ್ತಾ” (ಸೂ.ಭಾ. ೧-೧-೨). ತತ್ತ್ವಜ್ಞಾನವಾದರೋ ವೇದಾಂತವಾಕ್ಯಗಳಿಂದಲೇ ಉಂಟಾಗುತ್ತದೆ. ಬ್ರಹ್ಮಜ್ಞಾನವು ವೇದಾಂತವಾಕ್ಯಗಳ ಅರ್ಥದ ವಿಚಾರದಿಂದ ಮಾಡಿದ ನಿಶ್ಚಯದಿಂದ ಉಂಟಾಗುತ್ತದೆಯೇ ಹೊರತು ಕೇವಲ ಅನುಮಾನಾದಿಗಳಿಂದ ಆಗುವುದಿಲ್ಲವೆಂಬುದೇ ಈ ದರ್ಶನದ ಮುಖ್ಯೋಪದೇಶವಾಗಿರುತ್ತದೆ.

20. “ಅಪಿ ಚ ಸಮ್ಯಗ್ಜ್ಞಾನಾನ್ಮೋಕ್ಷಃ ಇತಿ ಸರ್ವೇಷಾಂ ಮೋಕ್ಷವಾದಿನಾಮ್ ಅಭ್ಯುಪಗಮಃ। ತಚ್ಚ ಸಮುಗ್ಜ್ಞಾನಂ ಏಕರೂಪಮ್। ವಸ್ತುತನ್ತ್ರತ್ವಾತ್। ಏಕರೂಪೇಣ ಹಿ ಅವಸ್ಥಿತೋ ಯೋಽರ್ಥಃ ಸ ಪರಮಾರ್ಥಃ। ಲೋಕೇ ತದ್ವಿಷಯಂ ಜ್ಞಾನಂ ಸಮ್ಯಗ್ಜ್ಞಾನಂ ಇತ್ಯುಚ್ಯತೇ ಯಥಾ ಅಗ್ನಿರುಷ್ಣಃ ಇತಿ” (ಸೂ. ಭಾ. ೨-೧-೧೧) ಸಮ್ಯಗ್ಜ್ಞಾನದಿಂದಲೇ ಮೋಕ್ಷವೆಂದು ಮೋಕ್ಷವಾದಿಗಳೆಲ್ಲರೂ ಒಪ್ಪುತ್ತಾರೆ. ವಸ್ತುವಿಗೆ ಅಧೀನವಾಗಿರುವದರಿಂದ ಸಮ್ಯಗ್ಜ್ಞಾನವು ಒಂದೇ ರೂಪವು. ಒಂದೇ ರೂಪವಾಗಿರುವುದೇ ಪರಮಾರ್ಥವು. ಬೆಂಕಿಯು ಬಿಸಿಯಾಗಿದೆ ಎಂಬಂತೆ ಲೋಕದಲ್ಲಿ ಆ ವಿಷಯದ ಜ್ಞಾನವೇ ಸಮ್ಯಗ್ಜ್ಞಾನವೆನಿಸುತ್ತದೆ.

21. “ನ ತು ವಸ್ತು ‘ಏವಮ್, ನೈವಮ್, ಅಸ್ತಿ, ನಾಸ್ತಿ’ ಇತಿ ವಾ ವಿಕಲ್ಪ್ಯತೇ। ವಿಕಲ್ಪನಾಸ್ತು ಪುರುಷಬುದ್ಧ್ಯಪೇಕ್ಷಾಃ ನ ವಸ್ತುಯಾಥಾತ್ಮ್ಯ

ಜ್ಞಾನಂ ಪುರುಷಬುದ್ಧ್ಯಪೇಕ್ಷಮ್ । ಕಿಂ ತರ್ಹಿ, ವಸ್ತುತಂತ್ರಮೇವ ತತ್ ।.... ತತ್ರ ಏವಂ ಸತಿ ಬ್ರಹ್ಮಜ್ಞಾನಮಪಿ ವಸ್ತುತಂತ್ರಮೇವ ; ಭೂತವಸ್ತುವಿಷಯ ತ್ವಾತ್" (ಸೂ. ಭಾ. ೧-೧-೨) ಆದರೆ (ಈಗಲೇ ಇರುವ) ವಸ್ತುವನ್ನು 'ಹೀಗಿದೆ, ಹೀಗಿಲ್ಲ' ಎಂದಾಗಲಿ 'ಇದೆ, ಇಲ್ಲ' ಎಂದಾಗಲಿ ವಿಕಲ್ಪಿಸುವುದಕ್ಕೆ ಆಗಲಾರದು. ವಿಕಲ್ಪನೆಗಳಾದರೋ ಪುರುಷನ ಬುದ್ಧಿಯನ್ನು ಅವಲಂಬಿಸು ತ್ತವೆ. ವಸುವಿನ ಯಥಾರ್ಥ (ನಿಜವಾದ) ಜ್ಞಾನವು ಪುರುಷನ ಬುದ್ಧಿಯನ್ನು ಅವಲಂಬಿಸಿ ಉಂಟಾಗುವುದಲ್ಲ; ಮತ್ತೇನೆಂದರೆ, ವಸ್ತುವಿಗೆ ಅಧೀನವಾಗಿಯೇ ಅದು ಉಂಟಾಗುವುದು. ಹೇಗೆಂದರೆ ಒಂದು ಮೋಟುಮರದಲ್ಲಿ 'ಇದು ಮೋಟು ಮರವೋ, ಪುರುಷನೋ, ಅಥವಾ ಬೇರಾವದಾದರೂ ಒಂದೋ'? ಎಂದು ತಿಳಿಯು ವದು ತತ್ತ್ವಜ್ಞಾನವಾಗಲಾರದು. ಅಲ್ಲಿ ಪುರುಷನೆಂದಾಗಲಿ, ಬೇರೊಂದೆಂದಾ ಗಲಿ ತಿಳಿಯುವುದು ಮಿಥ್ಯಾಜ್ಞಾನವು, 'ಮೋಟುಮರವೇ ಅದು'-ಎಂದು ನಿಶ್ಚಯಿಸುವದೇ ತತ್ತ್ವಜ್ಞಾನವು. ಏಕೆಂದರೆ ಅದು ವಸ್ತುವಿಗೆ ಅಧೀನ ವಾಗಿರುತ್ತದೆ. ಇಲ್ಲಿ ಹೀಗಿರುವದರಿಂದ ಬ್ರಹ್ಮಜ್ಞಾನವೂ ಆತ್ಮವಸ್ತುವಿಗೆ ಅಧೀನವಾಗಿಯೇ ಇರುತ್ತದೆಯೆನ್ನಬೇಕಾಗುವದು ; ಇದಕ್ಕೆ ಭೂತವಸ್ತುವೇ (ಸಿದ್ಧವಸ್ತುವೇ) ವಿಷಯವಾಗಿರುತ್ತದೆ.

22. ಬ್ರಹ್ಮಜ್ಞಾನವು ಮೊದಲೇ ಇರುವ ವಸ್ತುವಿನ ವಿಷಯವಾದ್ದರಿಂದ ವಸ್ತುವಿಗೆ ಅಧೀನವಾಗಿಯೇ ಹುಟ್ಟುತ್ತದೆ. ಆದರೆ ಕರ್ಮೋಪಾಸನಾರೂಪ ವಾದ ಕರ್ತವ್ಯವು ಪುರುಷನಿಗೆ ಅಧೀನವಾಗಿ ಹುಟ್ಟುತ್ತದೆ. ಮೋಕ್ಷಕ್ಕೆ ಕಾರಣ ವಾದ ತತ್ತ್ವಜ್ಞಾನವು ವಸ್ತುತಂತ್ರವಾದುದು-ಎಂಬುದೇ ಶಾಂಕರವೇದಾಂತ ದಲ್ಲಿರುವ ವಿಶೇಷವು. ಲೋಕದಲ್ಲಿ ಇದುವರೆಗೆ ಆಗಿಹೋಗಿರುವ ಮಿಕ್ಕೆಲ್ಲ ಮತಾಚಾರ್ಯರುಗಳೂ ಪುರುಷತಂತ್ರವಾದ, ಎಂದರೆ ಪುರುಷನ ಇಚ್ಛೆಗೂ ಭಾವನೆಗೂ ಪ್ರಯತ್ನಕ್ಕೂ ಅಧೀನವಾದ ಉಪಾಸನೆಯಿಂದಲೇ ಮೋಕ್ಷವೆಂದು ಹೇಳಿದ್ದಾರೆ. ಆದ್ದರಿಂದ ಅವರೆಲ್ಲರ ಮತದಲ್ಲಿಯೂ ಮೋಕ್ಷವು ಅದೃಷ್ಟವಾದ ಫಲವು. ಸಾಧಕನು ಸತ್ತಮೇಲೆ ಕಾಲಾಂತರದಲ್ಲಿಯೇ ಲೋಕಾಂತರದಲ್ಲಿಯೇ ಅವನಿಗೆ ಮೋಕ್ಷವು ಲಭಿಸಬೇಕು. ಆದ್ದರಿಂದ 'ಕ್ರಿಯಾಜನ್ಯತ್ವಾತ್ ತನ್ಮೋಕ್ಷ-ಮನಿತ್ಯಮ್' ಕ್ರಿಯೆಯಿಂದ ಹುಟ್ಟುವದರಿಂದ ಆ ಮೋಕ್ಷವು ಅನಿತ್ಯವು ಎಂದು ಆಚಾರ್ಯರು ಹೇಳಿದ್ದಾರೆ.

23. ಮನಸ್ಸೊಂದು ನಿರ್ಮಲವೂ ನಿಶ್ಚಲವೂ ಇದ್ದರೆ ಗುರುಬೋಧೆಯ ಮೂಲಕ ಆತ್ಮವಸ್ತುವಿಗೆ ಅಧೀನವಾಗಿ ಉಂಟಾಗುವ ತತ್ತ್ವಜ್ಞಾನದಿಂದ ಯಾರಿ ಗಾದರೂ ಇಲ್ಲಿಯೇ ಈಗಲೇ ತಮ್ಮ ಸ್ವರೂಪವಾದ ಮೋಕ್ಷವು ಅನುಭವಕ್ಕೆ ಬರುವುದೆಂದು ಶಂಕರರು ಸದ್ಯೋಮುಕ್ತಿಯನ್ನು ಹೇಳಿದ್ದಾರೆ. ಇದೇ ಶಾಂಕರ

ವೇದಾಂತದಲ್ಲಿ ಅಸಾಧಾರಣವಾದ ವಿಚಾರವು. 'ವಿಮುಕ್ತಶ್ಚ ವಿಮುಚ್ಯತೇ' ವಿಮುಕ್ತನೇ ವಿಮುಕ್ತನಾಗುತ್ತಾನೆ-ಎಂಬ ಕಠೋಪನಿಷತ್ತಿನ ವಾಕ್ಯವೂ ಆತ್ಮನು ನಿತ್ಯಮುಕ್ತನೆಂದೇ ಹೇಳುತ್ತಿದೆ. ಛಾಂದೋಗ್ಯಶ್ರುತಿಯು 'ತತ್ತ್ವಮಸಿ' ಎಂದು ಬೋಧಿಸಿದೆ. ಇದರ ನಿಜವಾದ ಅರ್ಥವು 'ಆ ಪರಬ್ರಹ್ಮವೇ ನೀನಾಗಿದ್ದೀಯೆ' ಎಂದಿರುತ್ತದೆ. 'ನೀನು ಸತ್ತಮೇಲೆ ಪರಮಾತ್ಮನಾಗುವೆ' ಎಂದೇನೂ ಇದರ ಅರ್ಥವನ್ನು ತಿರುಗಿಸುವದು ಸಾಧ್ಯವಿಲ್ಲ. ಶಂಕರರು ಸೂತ್ರಭಾಷ್ಯದಲ್ಲಿ ಹೀಗೆಯೇ ಹೇಳಿದ್ದಾರೆ. 'ನ ಹಿ ತತ್ತ್ವಮಸಿ ಇತ್ಯಸ್ಯ ವಾಕ್ಯಸ್ಯ ಅರ್ಥಃ ತತ್ ತ್ವಂ ಮೃತೋ ಭವಿಷ್ಯಸಿ ಇತ್ಯೇವಂ ಪರಿಣೇತುಂ ಶಕ್ಯಃ, "ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ" ಇತಿ ಶ್ರುತೇಃ' (ಸೂ. ಭಾ. ೩-೩-೨೯) ತತ್ತ್ವಮಸಿ ಎಂಬ ಮಹಾವಾಕ್ಯದ ಅರ್ಥವನ್ನು 'ನೀನು ಸತ್ತಮೇಲೆ ಅದಾಗುವೆ' ಎಂದೇನೂ ಮಾಡುವದಕ್ಕೆ ಆಗುವದಿಲ್ಲ. ಏಕೆಂದರೆ ಶ್ರುತಿಯು ಈ ಜೀವನು ಬ್ರಹ್ಮವೇ ಆಗಿದ್ದು ಬ್ರಹ್ಮವನ್ನು ಪಡೆಯುತ್ತಾನೆ (ಅರಿಯುತ್ತಾನೆ)–ಎಂದು ಹೇಳುತ್ತದೆ.

24. ಪರಮಾಣುಗರ್ಭದಲ್ಲಿ ಪ್ರಚಂಡಾದ್ಭುತಶಕ್ತಿಯಿದೆ– ಎಂದು ಪ್ರಸಿದ್ಧ ಐನ್‌ಸ್ಟೀನ್ ಮಹಾಶಯನು ಪರೀಕ್ಷಾಪ್ರಯೋಗಗಳಿಂದ ಕಂಡುಹಿಡಿದು ಹೇಳಿದನು. ಅವನು ಅದನ್ನು ತಿಳಿದು ಲೋಕಕ್ಕೆಲ್ಲ ತಿಳಿಸುವುದಕ್ಕೆ ಮೊದಲು ಪರಮಾಣುವಿನಲ್ಲಿ ಆ ಶಕ್ತಿಯಿತ್ತು ; ಇಂದೂ ಇದೆ. ಮುಂದೆಯೂ ಆ ಶಕ್ತಿ ನಿತ್ಯವಾಗಿರುವದು. ಇದನ್ನು ಯಾರಾದರೂ ಕಂಡುಕೊಳ್ಳಬಹುದು. ಆ ಪರಮಾಣುವಿಜ್ಞಾನವು ಇಡಿಯ ವಿಶ್ವದ ಜನರ ಆಸ್ತಿ. ಅದು ಯಾವದೊಂದು ವ್ಯಕ್ತಿಗೆ ಗುತ್ತಿಗೆಯಲ್ಲ. ಆದರೆ ಈ ಅರಿವನ್ನು ಪಡೆಯುವದಕ್ಕೆ ನಮ್ಮ ಮನಸ್ಸು ನಿರ್ಮಲವೂ ಸೂಕ್ಷ್ಮವೂ ಆಗಿರಬೇಕು. ಸ್ವಂತ ಕಲ್ಪನೆಗಳನ್ನೂ ಒಲವುಗಳನ್ನೂ ಪೂರ್ವಗ್ರಹಿಕೆಗಳನ್ನೂ ಬಿಟ್ಟಿರಬೇಕು. ಇಂಥ ರಾಗದ್ವೇಷರಹಿತವಾದ ಅತಿ ಸೂಕ್ಷ್ಮಮನಸ್ಸಿನಿಂದ ಪರಮಾಣುಗರ್ಭದಲ್ಲಿ ಸಂಯಮಮಾಡಿದರೆ ಇದರ ತತ್ತ್ವವೇನೆಂಬುದು ಯಾರಿಗಾದರೂ ವೇದ್ಯವಾಗುತ್ತದೆ. ಇದರ ನೈಜಜ್ಞಾನವು ವಸ್ತುವಿಗನುಗುಣವಾಗಿ ಇದ್ದುದಿದ್ದಂತೆ ಉಂಟಾಗುವದೇ ಹೊರತು ಇದು ನಮ್ಮ ಕಲ್ಪನೆಗನುಗುಣವಾಗಿ ಹುಟ್ಟುವುದಿಲ್ಲ. ಈ ಭೌತಿಕವಿಜ್ಞಾನವು ಹೊರಗಿನ ವಸ್ತುವಿನ ಸಂಬಂಧವಾದುದರಿಂದ ನಮ್ಮ ಮನಸ್ಸು ಹೊರಗೆ ನೋಡಬೇಕು. ಆದರೆ ಅಧ್ಯಾತ್ಮಸಾಧನೆಯಲ್ಲಿ ರಾಗದ್ವೇಷರಹಿತವಾದ ನಮ್ಮ ಅತ್ಯಂತಸೂಕ್ಷ್ಮ ಬುದ್ಧಿಯನ್ನು ಹೊರಗೆ ಹರಿಯಗೊಡದೆ ನಮ್ಮೊಳಗೇ ತಿರುಗಿಸಿ, ಶಾಂತವಾಗಿ ಅಂಗೈಯೊಳಗಿನ ಒಂದು ರತ್ನವನ್ನು ಕಣ್ಣಿಟ್ಟು ಚೆನ್ನಾಗಿ ಪರೀಕ್ಷಿಸಿದಂತೆ ನಮ್ಮ ಸ್ವರೂಪವನ್ನೇ ನಿರೀಕ್ಷಣೆಮಾಡಿದರೆ, ಇದು ಪರಮಾನಂದಸ್ವರೂಪವೆಂದೂ ನಿತ್ಯಮುಕ್ತವೆಂದೂ ಜ್ಞಾನಸಮಕಾಲದಲ್ಲಿಯೇ ಅನುಭವಕ್ಕೆ ಬರುತ್ತದೆ. ಭೂತ

ವಸ್ತುವಿಷಯವನ್ನೂ, ವಸ್ತುತಂತ್ರಜ್ಞಾನವನ್ನೂ ಅವಲಂಬಿಸಿರುವ ಶಂಕರರು ತಿಳಿಸುವದು ಸದ್ಯೋಮುಕ್ತಿ. ಎಲ್ಲರೂ ತಿಳಿದಿರುವಂತೆ ಇದು ಸ್ಪೂಟ್ನಿಕ್ ಯುಗ! ನಮ್ಮ ಬುದ್ಧಿಯು ಹಿಂದೆಂದೂ ಇಲ್ಲದಷ್ಟು ಅತಿಶಯವೇಗದಿಂದ ಈಗ ಓಡುತ್ತಿದೆ. ಪ್ರಚಂಡವೇಗದ ಭದ್ರವಾದ ಯಂತ್ರಸಾಧನಗಳಿಂದ ಬಾಹ್ಯಾಕಾಶವನ್ನು ಸ್ವಾಧೀನಮಾಡಿಕೊಂಡು ಲಕ್ಷೋಪಲಕ್ಷ ಮೈಲಿಗಳ ದೂರದಲ್ಲಿರುವ ಗ್ರಹನಕ್ಷತ್ರಗಳಿಗೆ ಹಾರಿ ಅಲ್ಲಿ ವಸತಿಯನ್ನೂ ಮಾಡಬೇಕೆಂದಿದ್ದೇವೆ. ವಿಜ್ಞಾನಿಯ ಯಂತ್ರದ ಮಿಂಚಿನ ವೇಗಕ್ಕಿಂತಲೂ ಮನೋವೇಗವು ಹೆಚ್ಚಿನದು. ಆದರೆ ಸರಿಯಾಗಿ ತಿಳಿದರೆ, ಈಗಲೇ ಇಲ್ಲಿಯೇ ನೀವು ಮುಕ್ತರು ಎಂಬ ಶಂಕರರ ಮೋಕ್ಷವಾದವು ಮನೋವೇಗವನ್ನೂ ಕುಂಠಿತಮಾಡುತ್ತದೆ. ಪರಮಾರ್ಥವನ್ನು ಗ್ರಹಿಸುವದರಲ್ಲಿ ಸಹಸ್ರವರ್ಷಗಳ ಹಿಂದೆಯೇ ಆವರ ಜಾಣ್ಮೆಯು ಸಾಧಿಸಿರುವ ಈ ವೇಗವನ್ನು ಯಾವ ವಿಜ್ಞಾನಿಯ ವೇಗವೂ ಮಿರಿಸಲಾರದು.

25. ಹಾಗಾದರೆ ನಾವು ಬ್ರಹ್ಮವೇ ಆಗಿದ್ದರೂ 'ನಾನು ಬ್ರಹ್ಮವಾಗಿದ್ದೇನೆ' ಎಂಬ ಅನುಭವವು ನಮಗೇಕೆ ಎಲ್ಲರಿಗೂ ಇಲ್ಲ? ಎಂದು ಶಂಕೆಯು ಬರುವದು ಸ್ವಾಭಾವಿಕ. ಅವಿದ್ಯೆಯೇ ಇದಕ್ಕೆ ಕಾರಣವೆಂದು ಶಂಕರರು ಹೇಳಿದ್ದಾರೆ. ಅವಿದ್ಯೆ ಎಂದರೆ ವಸ್ತುವನ್ನು ಅರಿಯದಿರುವದು, ಸಂಶಯಪಡುವದು, ಮತ್ತು ಹಗ್ಗವನ್ನು ಹಾವೆಂದು ತಿಳಿದಂತೆ ಒಂದನ್ನು ಮತ್ತೊಂದೆಂದು ತಪ್ಪಾಗಿ ತಿಳಿಯುವದು. 'ಯದಿ ಜ್ಞಾನಾಭಾವಃ, ಯದಿ ಸಂಶಯಜ್ಞಾನಂ, ಯದಿ ಮಿಥ್ಯಾಜ್ಞಾನಂ ವಾ ಉಚ್ಯತೇ ಅಜ್ಞಾನಮಿತಿ ಸರ್ವಂ ಹಿ ತತ್ ಜ್ಞಾನೇನೈವ ನಿವರ್ತ್ಯತೇ' (ಬೃ. ಭಾ. ೩-೩-೧) ಈ ಮೂರು ಬಗೆಯ ಅವಿದ್ಯೆಯೂ (ಅಜ್ಞಾನವೂ) ತತ್ತ್ವಜ್ಞಾನದಿಂದಲೇ ಪರಿಹಾರವಾಗುವದೆಂದು ಶಂಕರರು ಬೃಹದಾರಣ್ಯಕಭಾಷ್ಯದಲ್ಲಿ ಹೇಳಿದ್ದಾರೆ. ಅವಿದ್ಯೆಯೆಂದರೆ ಒಂದನ್ನು ಇನ್ನೊಂದೆಂದು ಭಾವಿಸುವ ತಪ್ಪುತಿಳಿವಳಿಕೆ. ಈ ತಪ್ಪುತಿಳುವಳಿಕೆಯು ಒಂದು ಪದಾರ್ಥದಲ್ಲಿಲ್ಲದ ಸ್ವಭಾವವನ್ನು ಅದರಲ್ಲಿ ಕಲ್ಪಿಸುವದರಿಂದ ಆಗುತ್ತದೆ. ಈ ಕಲ್ಪನೆಗೆ ಅಧ್ಯಾಸವೆಂದು ಹೆಸರು. ಉದಾಹರಣೆಗೆ: ಕಪ್ಪೆಯಚಿಪ್ಪನ್ನು ಬೆಳ್ಳಿಯೆಂದೂ ಹಗ್ಗವನ್ನು ಹಾವೆಂದೂ ತಪ್ಪಾಗಿ ತಿಳಿಯುತ್ತೇವೆ. ಇದು ಅನುಭವದಲ್ಲಿದೆ. "ತಮೇತಮೇವಂಲಕ್ಷಣಮ್ ಅಧ್ಯಾಸಂ ಪಂಡಿತಾ ಅವಿದ್ಯೇತಿ ಮನ್ಯನ್ತೇ" (ಅಧ್ಯಾಸಭಾಷ್ಯ). ಈ ಬಗೆಯ ಅಧ್ಯಾಸವನ್ನೇ ಪಂಡಿತರು ಅವಿದ್ಯೆಯೆಂದು ಭಾವಿಸುತ್ತಾರೆ. "ಅಧ್ಯಾಸೋ ನಾಮ ಅತಸ್ಮಿಂಸ್ತದ್ಬುದ್ಧಿರಿತ್ಯವೋಚಾಮ" (ಅಧ್ಯಾಸಭಾಷ್ಯ). ಅದಲ್ಲದ್ದನ್ನು ಅದೆಂದು ತಿಳಿಯುವದೇ, ಹಾವಲ್ಲದ್ದನ್ನು ಹಾವೆಂದು ತಿಳಿಯುವುದೇ, ಅಧ್ಯಾಸವೆಂದು ಆಚಾರ್ಯರು

ಹೇಳಿದ್ದಾರೆ. ಈ ಅವಿದ್ಯೆಯು ಆತ್ಮನಲ್ಲಿ ಅನಾತ್ಮವನ್ನೂ ಅನಾತ್ಮಧರ್ಮಗಳನ್ನೂ ಕಲ್ಪಿಸುವದಲ್ಲದೆ ಅನಾತ್ಮದಲ್ಲಿ ಆತ್ಮತ್ವವನ್ನೂ ಆತ್ಮಧರ್ಮಗಳನ್ನೂ ಕಲ್ಪಿಸುತ್ತದೆ.

"ಅಧ್ಯಾಸೋ ಮಿಥ್ಯಾಪ್ರತ್ಯಯರೂಪಃ ಕರ್ತೃತ್ವಭೋಕ್ತೃತ್ವಪ್ರವರ್ತಕಃ ಸರ್ವಲೋಕಪ್ರತ್ಯಕ್ಷಃ। ಅಸ್ಯಾನರ್ಥಹೇತೋಃ ಪ್ರಹಾಣಾಯ ಆತ್ಮೈಕತ್ವವಿದ್ಯಾಪ್ರತಿಪತ್ತಯೇ ಸರ್ವೇ ವೇದಾನ್ತಾ ಆರಭ್ಯಂತೇ ॥" (ಅಧ್ಯಾಸಭಾಷ್ಯ). ಇದರಿಂದಲೇ ಕರ್ತೃತ್ವಭೋಕ್ತೃತ್ವರೂಪವಾದ ಸಂಸಾರಾನರ್ಥವು ಕಲ್ಪಿತವಾಗಿದೆ. ಈ ಅವಿದ್ಯೆಯನ್ನು ತೊಲಗಿಸುವದಕ್ಕಾಗಿ ಆತ್ಮೈಕತ್ವವಿದ್ಯೆಯನ್ನು -ಎಂದರೆ ಎರಡನೆಯದಿಲ್ಲದ ಆತ್ಮನೊಬ್ಬನೇ ಸತ್ಯವೆಂಬ ವಿದ್ಯೆಯನ್ನು ಉಪದೇಶಿಸುವದಕ್ಕೆಂದೇ ಎಲ್ಲಾ ಉಪನಿಷತ್ತುಗಳೂ ಹೊರಟಿರುತ್ತವೆ- ಎಂದು ಶಂಕರರು ಅಧ್ಯಾಸಭಾಷ್ಯದಲ್ಲಿ ಹೇಳಿದ್ದಾರೆ.

26. ಅದ್ವಿತೀಯವಾದ ಬ್ರಹ್ಮವೊಂದೇ ಸತ್ಯವೆಂಬುದನ್ನು ಮಂದಮಧ್ಯಮಾಧಿಕಾರಿಗಳಿಗೆ ತಿಳಿಸುವದಕ್ಕೋಸ್ಕರ ಜಗತ್ತು ಬ್ರಹ್ಮದಿಂದ ಮಾಯಿಕವಾಗಿ ಹುಟ್ಟಿದೆ ಎಂದು ಶಂಕರರು ಹೇಳಿರುತ್ತಾರೆ. ಜಗತ್ತಿನ ಅಪೇಕ್ಷೆಯಿಂದ ಬ್ರಹ್ಮವನ್ನು ಈಶ್ವರನೆಂದು ಕರೆದಿದ್ದಾರೆ. ಸೃಷ್ಟಿಗೆ ಕಾರಣವಾದ ಈಶ್ವರಶಕ್ತಿಯೇ ಮಾಯೆ. ಅವರು ಸೂತ್ರಭಾಷ್ಯದಲ್ಲಿ "ಸರ್ವಜ್ಞಸ್ಯ ಈಶ್ವರಸ್ಯ ಆತ್ಮಭೂತೇ ಇವ ಅವಿದ್ಯಾಕಲ್ಪಿತೇ ನಾಮರೂಪೇ ತತ್ತ್ವಾನ್ಯತ್ವಾಭ್ಯಾಮನಿರ್ವಚನೀಯೇ ಸಂಸಾರಪ್ರಪಂಚಬೀಜಭೂತೇ ಸರ್ವಜ್ಞಸ್ಯ ಈಶ್ವರಸ್ಯ ಮಾಯಾ ಶಕ್ತಿಃ ಪ್ರಕೃತಿಃ ಇತಿ ಚ ಶ್ರುತಿಸ್ಮೃತ್ಯೋರಭಿಲಪ್ಯೇತೇ" (ಸೂ. ಭಾ. ೨ ೧-೧೪) ಈ ಮಾಯೆಯು ಬ್ರಹ್ಮಕ್ಕಿಂತ ಬೇರೆಯೆಂದಾಗಲಿ, ಬೇರೆಯಲ್ಲವೆಂದಾಗಲಿ, ಹೇಳುವದಕ್ಕೆ ಬಾರದ ಸ್ವಭಾವದ್ದು. ಅವಿದ್ಯೆಯಿಂದ ಕಲ್ಪಿತವಾಗಿರುವ ನಾಮರೂಪಬೀಜವೇ ಮಾಯೆಯು. ಅವ್ಯಾಕೃತವನ್ನೇ ಈಶ್ವರಶಕ್ತಿಯೆಂದೂ ಪ್ರಕೃತಿಯೆಂದೂ ಕರೆದಿರುತ್ತದೆ. ಬ್ರಹ್ಮದ ಸ್ವರೂಪವನ್ನೂ ಮಾಯೆಯ ಸ್ವರೂಪವನ್ನೂ ಪರಸ್ಪರಸಂಬಂಧವನ್ನೂ ಮನಗಾಣಲು ಒಂದೆರಡು ಸುಲಭವಾದ ದೃಷ್ಟಾಂತಗಳನ್ನು ಕೊಡಬಹುದು.

ಸರೋವರದಲ್ಲಿ (ಅಥವಾ ಸಾಗರದಲ್ಲಿ) ನಿಜವಾಗಿರುವದು ನೀರು. ಆದರೆ ಅದರಲ್ಲಿ ಅನಂತಾನಂತತೆರೆಗಳೂ ನೊರೆಗಳೂ ತೋರುತ್ತಿವೆ. ಅವು ತೋರುವುದಕ್ಕೆ ಮೊದಲು ನೀರೊಂದೇ ಇತ್ತು; ಅವೆಲ್ಲಾ ಅಡಗಿದಮೇಲೂ ನೀರೊಂದೇ ಉಳಿಯುವುದು. ಅವು ತೋರುತ್ತಿರುವಾಗಲೂ ಅವುಗಳೆಲ್ಲವೂ ನಿಜವಾಗಿ ನೀರೇ ಆಗಿವೆ. ನೀರೇ ನೋಟಕ್ಕೆ ತೆರೆನೊರೆಗಳಾಗಿ ತೋರುತ್ತಿದೆ. ನೀರು ವಸ್ತುವೇ ಹೊರತು ತೆರೆನೊರೆಗಳು ವಸ್ತುಗಳಲ್ಲ. ಅವು ವಾಸ್ತವವಲ್ಲ, ಬರಿಯ ತೋರಿಕೆ ಮಾತ್ರ. ತೆರೆನೊರೆಗಳು ನೀರನ್ನು ಬಿಟ್ಟು ಸ್ವತಂತ್ರವಾಗಿ ಇರಲಾರವು. ತೆರೆ

ನೊರೆಗಳು ನೀರಿನಿಂದ ಬೇರೆಯೆಂದಾಗಲಿ, ಬೇರೆಯಲ್ಲವೆಂದಾಗಲಿ, ಹೇಳುವದಕ್ಕೆ ಬಾರದ ಬಗೆಯೂದವು. ಆದರೆ ತೆರೆನೊರೆಗಳು ನೀರಿಗೆ ಅಧೀನವೇ ಹೊರತು ("ಸಾಮುದ್ರೋ ಹಿ ತರಂಗಃ ಕ್ವಚನ ಸಮುದ್ರೋ ನ ತಾರಂಗಃ") ನೀರು ತೆರೆ ನೊರೆಗಳಿಗೆ ವಶವಲ್ಲ. ತೆರೆನೊರೆಗಳ ವಿಲಾಸವಿಜೃಂಭಣೆಗಳಿಂದ ಮರುಳಾದವರಿಗೆ ನೀರಿನ ಲಕ್ಷ್ಯವೇ ಬಾರದಿರುವದು ಸ್ವಾಭಾವಿಕ. ವಿವೇಚನೆಯಿಂದ ನೋಡಿದಾಗ ಮಾತ್ರ ಸರ್ವಕಾರಣವಾದ ನೀರೊಂದೇ ಸತ್ಯವೆನಿಸುತ್ತದೆ. ತೆರೆನೊರೆಗಳ ನಾಮ ರೂಪವಿಲಾಸವಿಭ್ರಮಗಳು ನೀರಿನ ದೃಷ್ಟಿಯಿಂದ ಮಿಥ್ಯೆ, ಮಾಯೆ. ತೋರಿ ಅಡಗುವ ತೆರೆನೊರೆಗಳಿಗೆ ಆಧಾರವಾಗಿ, ಅವುಗಳಲ್ಲಿ ವ್ಯಾಪಕವೂ ಆಗಿ ತೋರದೆ ಅಡಗದೆ ಯಾವಾಗಲೂ ಇರುವ ನೀರೊಂದೇ ಸತ್ಯ- ಬ್ರಹ್ಮ. ಹೀಗೆಯೇ ಮರುಮರೀಚಿಕೆ, ಶುಕ್ತಿರಜತ, ಮೊದಲಾದ ಉದಾಹರಣೆಗಳಿಂದ ಮಾಯೆಯ ಸ್ವಭಾವವನ್ನು ಅರ್ಥಮಾಡಿಕೊಳ್ಳಬಹುದು.

27. ಈ ಮಾಯೆ, ಅವಿದ್ಯೆ ಎಂಬಿವುಕೂಡ ಅಧ್ಯಾರೋಪ-ಅಪವಾದ ನ್ಯಾಯದಿಂದ ಅದ್ವಿತೀಯಬ್ರಹ್ಮವನ್ನು ತಿಳಿಸುವದಕ್ಕಾಗಿ ಕಲ್ಪಿತವಾದ ಪದಾರ್ಥಗಳೇ ಹೊರತು ಪರಮಾರ್ಥವಲ್ಲ, ಸತ್ಯವಲ್ಲ- ಎಂಬಿದನ್ನು ನಾವು ಮರೆಯು ಬಾರದು. ವ್ಯವಹಾರದಲ್ಲಿ ತೋರುವ ಕಾರ್ಯಕಾರಣಬುದ್ಧಿಯನ್ನು ಸತ್ಯವೆಂದು ಆಗ್ರಹದಿಂದ ಹಿಡಿದಿರುವ ಮಂದಮತಿಗಳಿಗೆ ನಿಜವನ್ನು ತಿಳಿಸುವದಕ್ಕಾಗಿ ಮಾಯೆಯನ್ನು ಶಂಕರರು ಕಲ್ಪಿಸಿರುತ್ತಾರೆ. ಮಾಯೆಯಿಂದ ನಿಜವಾಗಿ ಪ್ರಪಂಚವುಂಟಾಗಿದೆ. ಎಂಬ ಭ್ರಾಂತಿಯುಳ್ಳವರಿಗಾಗಿ ಮಾಯೆಯು ಅವಿದ್ಯಾಕಲ್ಪಿತವೆಂದು ಹೇಳಿರುತ್ತಾರೆ. ಆ ಅವಿದ್ಯೆಯಿಂದಾದ ದೋಷವು ಆತ್ಮನಿಗೆ ಬಾಧಿಸುವದಿಲ್ಲವೆ ? ಎಂದು ಶಂಕಿಸುವವರ ತಿಳುವಳಿಕೆಗಾಗಿ, ಸರ್ವದಾ ಬೆಳಗುತ್ತಿರುವ ಪ್ರಕಾಶವೇ ತನ್ನ ಸ್ವಭಾವವಾದ ಸೂರ್ಯನಲ್ಲಿ ಹೇಗೆ ಕತ್ತಲೆಯಿರುವದು ಸಾಧ್ಯವಿಲ್ಲವೋ ಹಾಗೆ ನಿತ್ಯಸ್ವಯಂಜ್ಯೋತಿಸ್ವರೂಪಪ್ರಜ್ಞಾನಘನನಾದ ಆತ್ಮನಲ್ಲಿ ಅವಿದ್ಯೆಯು ನಿಜವಾಗಿಲ್ಲವೇ ಇಲ್ಲವೆಂದೂ ಆತ್ಮನು ನಿತ್ಯನಿರ್ವಿಶೇಷನೆಂದೂ ಶಂಕರರು ಬೋಧಿಸಿರುತ್ತಾರೆ.

28. ಬ್ರಹ್ಮವು ಅಥವಾ ಆತ್ಮವು ನಿರ್ವಿಶೇಷವು ಎಂಬಿದೇ ವೇದಾಂತದ ಮೂಲೋಪದೇಶವು. ಆದ್ದರಿಂದಲೇ ಶ್ರುತಿಯು ಅನಾತ್ಮಧರ್ಮಗಳನ್ನು ನೇತಿ, ನೇತಿ- ಇದಲ್ಲ, ಇದಲ್ಲ, ಎಂದು ಅಲ್ಲಗಳೆದೇ ಬ್ರಹ್ಮವನ್ನು ತಿಳಿಸಿದೆ. ಇದಕ್ಕಿಂತ ಹೆಚ್ಚಿನ ಉಪದೇಶಕ್ರಮವಿಲ್ಲವೆಂದೂ ಹೇಳಿರುತ್ತದೆ. ನಿರ್ವಿಶೇಷ ಬ್ರಹ್ಮವನ್ನು ತಿಳಿಸಿಕೊಡುವದಕ್ಕಾಗಿ ಶಂಕರರು 'ಅಧ್ಯಾರೋಪ-ಅಪವಾದನ್ಯಾಯ'

ವನ್ನು ಉಪಯೋಗಿಸಿದ್ದಾರೆ. ಅವರು ಗೀತಾಭಾಷ್ಯದಲ್ಲಿ : "ತಥಾ ಹಿ ಸಂಪ್ರದಾಯವಿದಾಂ ವಚನಮ್-ಅಧ್ಯಾರೋಪಾಪವಾದಾಭ್ಯಾಂ ನಿಷ್ಪ್ರಪಂಚಂ ಪ್ರಪಂಚ್ಯತೇ-ಇತಿ" (ಗೀ.ಭಾ. ೧೩-೧೩) 'ಯಾವ ಪ್ರಪಂಚವೂ ಇಲ್ಲದ (ಆತ್ಮತತ್ತ್ವವನ್ನು) ಅಧ್ಯಾರೋಪ-ಅಪವಾದ ಇವುಗಳ ಮೂಲಕವಾಗಿ ವಿಸ್ತರಿಸಲಾಗುತ್ತದೆ' ಎಂದು ಸಂಪ್ರದಾಯವನ್ನು ಬಲ್ಲವರ ವಚನವಿದೆ ; ಅದು ಹೀಗೆಂಬೇ ತಿಳಿಸುತ್ತದೆ-ಎಂದಿದ್ದಾರೆ. ಅಧ್ಯಾರೋಪವೆಂದರೆ ಕಲ್ಪನೆ ; ಅಪವಾದವೆಂದರೆ ಅಲ್ಲಗಳೆಯುವದು. ಶಂಕರರು ಗೀತಾಭಾಷ್ಯದಲ್ಲಿ ಈ ವಿಷಯವಾಗಿ ಹೇಳಿರುವದೇನೆಂದರೆ : 'ತಸ್ಮಾತ್ ಅವಿದ್ಯಾಧ್ಯಾರೋಪಿತನಿರಾಕರಣಮಾತ್ರಂ ಬ್ರಹ್ಮಣಿ ಕರ್ತವ್ಯಮ್ । ನ ತು ಬ್ರಹ್ಮವಿಜ್ಞಾನೇ ಯತ್ನಃ, ಅತ್ಯಂತಪ್ರಸಿದ್ಧತ್ವಾತ್ ॥' (ಗೀ. ೧೮-೫೦). ಆದ್ದರಿಂದ ಅವಿದ್ಯೆಯಿಂದ (ಕಲ್ಪಿತವಾಗಿರುವದನ್ನು) ಆರೋಪಿತವಾಗಿರುವದನ್ನು ಅಲ್ಲಗಳೆಯುವದೊಂದೇ ಬ್ರಹ್ಮದ ವಿಷಯದಲ್ಲಿ ಮಾಡತಕ್ಕದ್ದೇ ಹೊರತು ಬ್ರಹ್ಮದ ವಿಜ್ಞಾನಕ್ಕಾಗಿ ಪ್ರಯತ್ನವನ್ನು ಮಾಡಬೇಕಾದದ್ದಿರುವದಿಲ್ಲ. ಏಕೆಂದರೆ ಬ್ರಹ್ಮವು ನಮ್ಮೆಲ್ಲರ ಆತ್ಮಸ್ವರೂಪದಿಂದ ಅತ್ಯಂತಪ್ರಸಿದ್ಧವಾಗಿರುತ್ತದೆ. "ತಸ್ಮಾತ್ ಬಾಹ್ಯಾಕಾರಭೇದಬುದ್ಧಿನಿವೃತ್ತಿರೇವ ಆತ್ಮಸ್ವರೂಪಾವಲಂಬನಕಾರಣಂ... ತಸ್ಮಾತ್ ಜ್ಞಾನೇ ಯತ್ನೋ ನ ಕರ್ತವ್ಯಃ, ಕಿಂ ತು ಅನಾತ್ಮನಿ ಆತ್ಮಬುದ್ಧಿನಿವೃತ್ತಾವೇವ । ತಸ್ಮಾತ್ ಜ್ಞಾನನಿಷ್ಠಾ ಸುಸಂಪಾದ್ಯಾ ॥" (ಗೀ. ೧೮-೫೦) ಆದ್ದರಿಂದ ಹೊರಗಿನ ವಿಷಯಗಳ ಆಕಾರದ ಭೇದಬುದ್ಧಿಯನ್ನು ತೊಲಗಿಸುವದೇ ಆತ್ಮಸ್ವರೂಪವನ್ನು ಆಶ್ರಯಿಸುವದಕ್ಕೆ ಕಾರಣವಾಗುತ್ತದೆ. ಆದ್ದರಿಂದ ಜ್ಞಾನಕ್ಕಾಗಿ ಯತ್ನವನ್ನು ಮಾಡಬೇಕಾದದ್ದಿಲ್ಲ. ಆದರೆ ಅನಾತ್ಮದಲ್ಲಿರುವ ಆತ್ಮಬುದ್ಧಿಯನ್ನು ತೊಲಗಿಸಿಕೊಳ್ಳುವದಕ್ಕಾಗಿಯೇ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಆದ್ದರಿಂದ ಜ್ಞಾನನಿಷ್ಠೆಯನ್ನು ಸುಲಭವಾಗಿ ಪಡೆದುಕೊಳ್ಳಬಹುದು.

ಮಹಾಮಹೋಪಾಧ್ಯಾಯ ಪ್ರೊಫೆಸರ್ ಎಸ್. ಕುಪ್ಪುಸ್ವಾಮಿಶಾಸ್ತ್ರಿ, M.A.I.E.S ಇವರು "Sankara and the Brihadaranyakopanisad" ಎಂಬ ಲೇಖನದಲ್ಲಿ ಹೇಳಿರುವದೇನೆಂದರೆ: "According to Sri Sankara Adhyaropa and Apavada constitute the Chief means of fully realizing the absolute reality called Suddha Brahma" ಶ್ರೀ ಶಂಕರರ ಅಭಿಪ್ರಾಯದಂತೆ ಶುದ್ಧಬ್ರಹ್ಮವೆಂಬ ಆತ್ಯಂತಿಕ ಸತ್ಯವನ್ನು ಸಂಪೂರ್ಣವಾಗಿ ಅನುಭವಪಡೆಯುವದಕ್ಕೆ ಅಧ್ಯಾರೋಪ-ಅಪವಾದ ನ್ಯಾಯವೇ ಪ್ರಧಾನಸಾಧನವಾಗಿದೆ.

29. ಅಧ್ಯಾರೋಪ- ಅಪವಾದನ್ಯಾಯವನ್ನು ಲೋಕದಲ್ಲಿಯೂ ಬೋಧಕರು ಉಪಯೋಗಿಸುವದುಂಟು. ಉದಾಹರಣೆಗೆ: ಬ್ರಹ್ಮನಿಷ್ಠರಾದ ಗುರುಗಳಲ್ಲಿ ಅವರ ಶಿಷ್ಯರೊಬ್ಬರು ಬಂದು ವಿಜ್ಞಾಪಿಸಿಕೊಂಡರು. 'ಸ್ವಾಮಿ ! ನನ್ನ ಮಗನನ್ನು ತಾವು ಬಹಳ ಮೆಚ್ಚಿಕೊಂಡಿದ್ದೀರಿ, ಆದರೆ ಅವನ ಪ್ರಚಂಡ ಸ್ವಭಾವವನ್ನು ಸಹಿಸುವದೇ ಸಾಧ್ಯವಿಲ್ಲವಾಗಿದೆ, ಅವನು ದುಷ್ಟನೆಂದು ಹೇಳಿದರೆ ತಾವು 'ಅಲ್ಲ, ಅವನು ವಿಭೂತಿಪುರುಷ, ಯೋಗಭ್ರಷ್ಟ, ಪ್ರಚಂಡವ್ಯಕ್ತಿಯಾಗುತ್ತಾನೆ' ಎಂದಿದ್ದಿರಿ.

ಅದಕ್ಕೆ ಗುರುಗಳು ಹೇಳಿದರು ; 'ಹೌದಪ್ಪ, ಅವನು ಪ್ರಚಂಡನೆನ್ನುವುದೇ ನಿಜ, ಆದರೆ ಅವನು ಯಾರಿಗಾದರೂ ಹಾನಿಯನ್ನು ಮಾಡುತ್ತಾನೇನು ? ಅದೇನೂ ಇಲ್ಲವೆಂದು ಹೇಳುತ್ತೀಯಲ್ಲ, ಅವನು ಪ್ರತಾಪಶಾಲಿಯಾದ್ದರಿಂದಲೇ ಅವನು ಪ್ರಚಂಡನಾಗಿ ತೋರುತ್ತಾನೆ' ಎಂದರು. ಅದಕ್ಕೆ ಪುನಃ ಶಿಷ್ಯನು ಹೇಳಿದನು : 'ಇರಬಹುದು ಸ್ವಾಮಿ. ಆದರೆ ಅವನ ಪ್ರತಾಪವೇ ದುಸ್ಸಹವಾಗಿದೆ.' ಆಗ ಗುರುಗಳು ಸಮಾಧಾನಮಾಡಿದರು; "ಸರಿ ಕಣಯ್ಯ ! ಅವನಲ್ಲಿ ಅಸಾಧಾರಣಪ್ರತಿಭೆಯಿದೆ, ಆದಕ್ಕೆ ಇನ್ನೂ ಚಿಕ್ಕವಯಸ್ಸಾದ್ದರಿಂದ ಗುರಿಯೂ ದಾರಿಯೂ ಸಿಕ್ಕಿಲ್ಲ, ಆದ್ದರಿಂದಲೇ ಅವನು ಸಾಹಸದಿಂದ ಪ್ರತಾಪಿಯಾಗಿಯೂ ಕಾರ್ಯದಿಂದ ಪ್ರಚಂಡನಾಗಿಯೂ ಒಳಗಿರುವ ಹಿರಿಯಚೇತನಪ್ರಭುತ್ವದರ್ಪದಿಂದ ದುಷ್ಟನಾಗಿಯೂ ತೋರುತ್ತಾನೆ. ಅವನಲ್ಲಿರುವ ಪ್ರತಿಭೆಯಾದರೂ ನನ್ನಲ್ಲಿಯೂ ನಿನ್ನಲ್ಲಿಯೂ ಎಲ್ಲರಲ್ಲಿಯೂ ಇರುವ ಚೈತನ್ಯವೇ ; ಅದು ಅವನಲ್ಲಿ ವಿಶೇಷಪ್ರಜ್ಞಾಶಕ್ತಿಯಿಂದ ಪ್ರಕಾಶಿಸುವದಾಗಿದೆ" ಎಂದರು.

ಹೀಗೆ ಅವನು ದುಷ್ಟನೆಂಬ ಕಲ್ಪನೆಯನ್ನು ಕಳೆಯುವದಕ್ಕಾಗಿ ಪ್ರಚಂಡನೆಂಬ ಅಧ್ಯಾರೋಪವನ್ನು ಮಾಡಿದರು. ಮುಂದೆ ಆ ಪ್ರಚಂಡನೆಂಬುದನ್ನೂ ಅಲ್ಲಗಳೆಯುವದಕ್ಕಾಗಿ ಪ್ರತಾಪಿಯೆಂಬ ಅಧ್ಯಾರೋಪವನ್ನೂ ಅದನ್ನೂ ತಳ್ಳುವದಕ್ಕಾಗಿ ಪ್ರತಿಭಾಶಾಲಿಯೆಂಬ ಕಲ್ಪನೆಯನ್ನೂ ಮಾಡಿ ಸರ್ವಾತ್ಮಭಾವದ ಪ್ರಜ್ಞೆಯಲ್ಲಿ ನಿಲ್ಲಿಸಿದರು. ಹೀಗೆ ಏನನ್ನಾದರೂ ಕಲ್ಪಿಸುವದೇ ಅಧ್ಯಾರೋಪ, ಅದನ್ನು ಅಲ್ಲಗಳೆಯುವದೇ ಅಪವಾದ. ಈ ಉಪಾಯದಿಂದ ಶಾಸ್ತ್ರವೂ ಗುರುಗಳೂ ಅಧಿಕಾರಿಯನ್ನು ಹೊರಗಿನ ಸ್ಥೂಲದೃಷ್ಟಿಯಿಂದ ಬಿಡಿಸಿ ಒಳಗಿನ ಸೂಕ್ಷ್ಮ, ಸೂಕ್ಷ್ಮತರ, ಸೂಕ್ಷ್ಮತಮಭಾವಗಳಿಗೆ ಬೆಳೆಯಿಸಿ ಕೊನೆಗೆ ನಿರ್ವಿಶೇಷನಾದ ಪ್ರತ್ಯಗಾತ್ಮನಲ್ಲಿ ಅಥವಾ ಪರಮಾತ್ಮನಲ್ಲಿ ನೆಲೆಗೊಳಿಸುತ್ತಾರೆ.

ಪರಮಾತ್ಮನೊಬ್ಬನೇ ಅದ್ವಿತೀಯನಾಗಿ ಇರುವನಾದರೂ ಒಳಹೊರಗೆಲ್ಲವೂ (ಅಖಂಡಾದ್ವಿತೀಯ ಬ್ರಹ್ಮಸ್ವರೂಪವಾದ ನಮ್ಮಲ್ಲಿ ನಾನು, ನನ್ನ ಒಳಗೆ, ಹೊರಗೆ-ಎಂಬಿವೆಲ್ಲಾ ಕಲ್ಪಿತವೇ;) ಅವನೇ ತುಂಬಿರುವನಾದರೂ, ನಮ್ಮೊಳಗೆ

'ಜೀವ ನಾನೆಂಬ' ಅಧ್ಯಾರೋಪವೂ (ಕಲ್ಪನೆಯೂ) ಹೊರಗೆ ಪ್ರಪಂಚವು ಸತ್ಯವಾಗಿರುವದೆಂಬ ಅಧ್ಯಾರೋಪವೂ ಅನಾದಿಕಾಲದಿಂದಲೂ ನಮ್ಮಲ್ಲಿ ಸ್ವಾಭಾವಿಕವಾಗಿ ಭ್ರಮರೂಪವಾಗಿ ಬೆಳೆದುಬಂದಿದೆ. ದುಃಖರೂಪವಾದ ಹೊರಗಿನ ಪ್ರಪಂಚವು ತಮಗೆ ನಿಜವಾಗಿ ಬಾಧಿಸುತ್ತಿದೆಯೆಂದು ಪೇಚಾಡತಕ್ಕವರಿಗೆ (ಹಿಂದೆ ಹೇಳಿರುವಂತೆ) ಅದಕ್ಕೆ ಕಾರಣವಾದ ಮಾಯೆಯನ್ನೂ, ಮಾಯೆಯಾದರೂ ಸತ್ಯವೆಂದು ತಿಳಿಯಬಾರದೆಂದು ಅದಕ್ಕೆ ಕಾರಣವಾದ ಅವಿದ್ಯೆಯನ್ನೂ, ಅವಿದ್ಯೆಯಾದರೂ ಮೂಲದೋಷವಾಗಿ ಆತ್ಮನಲ್ಲಿ ಇರಬಹುದಲ್ಲ? ಎಂದು ಶಂಕಿಸಬಾರದೆಂದು ನಿತ್ಯನಿರ್ವಿಕಲ್ಪವಾದ ಚಿನ್ಮಾತ್ರಸ್ವರೂಪದಲ್ಲಿ ಸೂರ್ಯಪ್ರಕಾಶದಲ್ಲಿ ತಮಸ್ಸಿನಂತೆ ಅವಿದ್ಯೆಯು ಲೇಶಮಾತ್ರವೂ ಇರುವದೇ ಸಾಧ್ಯವಿಲ್ಲವೆಂದೂ ಆಚಾರ್ಯರು ಉಪದೇಶದಿಂದ ಅಲ್ಲಗಳೆಯುತ್ತಾರೆ. ಹೀಗೆಯೇ ವ್ಯವಹಾರದೃಷ್ಟಿಯಿಂದ ಜೀವನೆಂದು ತೋರುವ ಆತ್ಮನಲ್ಲಿ ಅಧ್ಯಾರೋಪಿತವಾಗಿರುವ ಜೀವತ್ವವನ್ನು ಅಲ್ಲಗಳೆಯುವದಕ್ಕಾಗಿ ಸುಷುಪ್ತಿಯ ಸಂಬಂಧದಿಂದ ಪ್ರಾಜ್ಞತ್ವವನ್ನು ಶ್ರುತಿಯು ಅಧ್ಯಾರೋಪಿಸಿರುತ್ತದೆ. ಬಳಿಕ ಅದೇ ಆತ್ಮನಲ್ಲಿ ಅಧ್ಯಾರೋಪಿತವಾಗಿರುವ ಪ್ರಾಜ್ಞತ್ವವನ್ನು ತಳ್ಳಿಹಾಕುವದಕ್ಕಾಗಿ ತುರೀಯತ್ವವನ್ನು ಅಧ್ಯಾರೋಪಿಸಿರುತ್ತದೆ. ಪರಮಾರ್ಥದೃಷ್ಟಿಯಿಂದ ಆತ್ಮನಲ್ಲಿ ಜೀವತ್ವವಾಗಲಿ, ಪ್ರಾಜ್ಞತ್ವವಾಗಲಿ, ತುರೀಯತ್ವವಾಗಲಿ ಇಲ್ಲ. ಪ್ರಾಣಧಾರಣೆ ಎಂಬ ಉಪಾಧಿಯಿಂದ ಜೀವತ್ವವೂ ಜಗತ್ಕಾರಣತ್ವ ಎಂಬ ಉಪಾಧಿಯಿಂದ ಪ್ರಾಜ್ಞತ್ವವೂ ಅವಸ್ಥಾತ್ರಯಗಳ ದೃಷ್ಟಿಯಿಂದ ತುರೀಯತ್ವವೂ ಆತ್ಮನಲ್ಲಿ ಕಲ್ಪಿತವಾಗಿರುತ್ತವೆ. ಈ ಉಪಾಧಿಗಳೆಲ್ಲವೂ ಅವಿದ್ಯಾದೃಷ್ಟಿಯಿಂದಲೇ ತೋರುತ್ತಿರುವದರಿಂದ ಪರಮಾರ್ಥದೃಷ್ಟಿಯಿಂದ ಆತ್ಮನು ಜೀವನೂ ಅಲ್ಲ, ಪ್ರಾಜ್ಞನೂ ಅಲ್ಲ, ತುರೀಯನೂ ಅಲ್ಲ. ನಮ್ಮೆಲ್ಲರ ಆತ್ಮವು ಸರ್ವಪ್ರಪಂಚೋಪಶಮ (ನಿಷ್ಪ್ರಪಂಚ)ವಾದ ಅದ್ವಿತೀಯನಿರ್ವಿಶೇಷಬ್ರಹ್ಮವೇ ಆಗಿದೆ.

ಹೀಗೆ ಭ್ರಾಂತಿಜನ್ಯವಾದ ಲೋಕಾನುಭವವನ್ನು **ವ್ಯವಹಾರದೃಷ್ಟಿ**ಯಿಂದ ಒಪ್ಪಿಕೊಂಡಂತೆ ಅನುವಾದಮಾಡಿಕೊಳ್ಳುವದೇ ಅ ಧ್ಯಾ ರೋ ಪ. ಶ್ರುತಿಯು ಬೋಧಿಸುವ ಸಾರ್ವತ್ರಿಕವೂ ಪರಿಪೂರ್ಣವೂ ಸ್ವಭಾವಸಿದ್ಧವೂ ಆದ ಅನುಭವದ ಆಧಾರದಿಂದ ಯುಕ್ತಿಯುಕ್ತವಾಗಿ ವಿಚಾರಮಾಡಿ, ಅದ್ವಿತೀಯನಾದ ಆತ್ಮನಲ್ಲಿ ಮನಸ್ಸನ್ನು ನೆಲೆನಿಲ್ಲಿಸಿ, ವ್ಯವಹಾರದೃಷ್ಟಿಯ ಲೋಕಾನುಭವವೆಲ್ಲವೂ ಬರಿಯ ಹುಸಿತೋರಿಕೆ, ಮಾಯೆ ; ಎಷ್ಟೂ ನಿಜವಲ್ಲ- ಎಂದು ನಿಶ್ಚಯಪಡಿಸುವದೇ **ಪರಮಾರ್ಥದೃಷ್ಟಿ**ಯ ಅಪವಾದ! ಇದೇ ಶಂಕರರ ಉಪದೇಶದ ಸತ್ತ್ವಸಾರ! ಇದೇ ಶಾಂಕರಭಾಷ್ಯಸರ್ವಸ್ವದ ಪರಮಸಾರವಾಗಿದೆ! ಆದರೆ ಇದು ಶಾಂಕರಭಾಷ್ಯವೆಂಬ ಮಹಾಸಿಂಧುವಿನ ಒಂದು ಅಮೃತಬಿಂದುಮಾತ್ರವೆಂಬುದನ್ನು ನಾವು ಮರೆಯಬಾರದು.

ಕೇಳಿರಿ !

ಶಂಕರಭಾಷ್ಯರತ್ನಪೇಟಿಕೆಯನ್ನು ತೆರೆಯುವ ಬೀಗದ ಕೈ

ಅಪ್ರಮೇಯವೂ ನಿರ್ವಿಶೇಷವೂ (ನಿಷ್ಪ್ರಪಂಚವೂ) ಅದ್ವಿತೀಯವೂ ಆದ ಪರಮಾರ್ಥಸತ್ಯವನ್ನು ತಿಳಿಸುವದಕ್ಕಾಗಿ ಶ್ರುತಿಯು ಅನೇಕ ಪ್ರಕ್ರಿಯೆಗಳನ್ನು ಉಪಾಯವಾಗಿ ಉಪಯೋಗಿಸಿದೆ. ಇವುಗಳಲ್ಲಿ ಮುಖ್ಯವಾದವು ಯಾವುವೆಂದರೆ : (1) ಅವಸ್ಥಾತ್ರಯಪ್ರಕ್ರಿಯೆ (2) ಕಾರ್ಯ-ಕಾರಣಪ್ರಕ್ರಿಯೆ (3) ಪಂಚಕೋಶವಿವೇಕಪ್ರಕ್ರಿಯೆ (4) ವಿದ್ಯಾವಿದ್ಯಾಪ್ರಕ್ರಿಯೆ (5) ಬಂಧ-ಮೋಕ್ಷಪ್ರಕ್ರಿಯೆ (6) ಅವಿದ್ಯಾ-ಮಾಯಾಪ್ರಕ್ರಿಯೆ (7) ಜೀವೇಶ್ವರಪ್ರಕ್ರಿಯೆ (8) ಸ್ಥೂಲಸೂಕ್ಷ್ಮಪ್ರಕ್ರಿಯೆ (9) ಸಾಮಾನ್ಯ-ವಿಶೇಷಪ್ರಕ್ರಿಯೆ (10) ವ್ಯಷ್ಟಿಸಮಷ್ಟಿಪ್ರಕ್ರಿಯೆ....ಇತ್ಯಾದಿ.

ಈ ಎಲ್ಲಾ ಪ್ರಕ್ರಿಯೆಗಳಲ್ಲಿಯೂ ಅಧ್ಯಾರೋಪ- ಅಪವಾದ ಪ್ರಕ್ರಿಯೆಯೇ The Method of Super imposition and rescission) ಮೂಲಭೂತವಾಗಿಯೂ ಹಾಸುಹೊಕ್ಕಾಗಿಯೂ ಸರ್ವಗ್ರಾಸಿ (Hold-all) ಆಗಿಯೂ ಇರುವದನ್ನು ಕಾಣಬಹುದು. ಅಧ್ಯಾರೋಪ-ಅಪವಾದ ನ್ಯಾಯವನ್ನು ವಿಶದಗೊಳಿಸುವದಕ್ಕಾಗಿಯೇ ಮಿಕ್ಕೆಲ್ಲಾ ನ್ಯಾಯಗಳೂ ಉಪಕಾರಕವಾಗಿ ಬಂದಿವೆ-ಎಂಬಿದೇ ಗೂಢವಾದ ಸತ್ಯ. ಆದ್ದರಿಂದ ಉಪನಿಷತ್ತುಗಳ ರಹಸ್ಯಾರ್ಥವೆಂಬ ರತ್ನ ಮಂಜೂಷದ ಕವಾಟವನ್ನು ತೆರೆಯಲು ಅಧ್ಯಾರೋಪ- ಅಪವಾದ ನ್ಯಾಯವೇ ನಾಯಕ- ಬೀಗದ ಕೈ (ಗುರು ಕುಂಚಿಕಾ, Master-Key) ಆಗಿದೆ- ಎಂಬಿದೇ ಶಂಕರಭಾಷ್ಯದ ತಾತ್ಪರ್ಯಾರ್ಥವಾಗಿದೆ. ಇದನ್ನು ಮರೆತಿರುವದರಿಂದಲೇ ಅಥವಾ ಇದರ ಮಹತ್ತ್ವವನ್ನು ಅರಿಯದಿರುವದರಿಂದಲೇ ವಿವಿಧ ವಾದಗ್ರಸ್ತವೂ ವಿರುದ್ಧಾರ್ಥವುಳ್ಳವಾಗಿಯೂ ತೋರುವ ಪ್ರಕ್ರಿಯೆಗಳ ಶಬ್ದಜಾಲದ ಮಹಾರಣ್ಯದಲ್ಲಿ ಸಿಕ್ಕಿಕೊಂಡು ದಿಕ್ಕುತೋರದೆ ನಾವು ತೊಳಲಾಡುತ್ತಿದ್ದೇವೆ.

ಲೇಖಕರು.

ಅಧ್ಯಾತ್ಮಪ್ರಕಾಶಕಾರ್ಯಾಲಯ,

ಬೆಂಗಳೂರು ಶಾಖೆ,

ತ್ಯಾಗರಾಜನಗರ - ಬೆಂಗಳೂರು - ೨೮.

ಬ್ರಹ್ಮೀಭೂತ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರ ತಪಃಫಲದಿಂದ ಸ್ಥಾಪಿತವಾಗಿರುವ ಈ ಸಂಸ್ಥೆಯು ಹೊಳೆನರಸೀಪುರದ ಪ್ರಧಾನಕಾರ್ಯಾಲಯದೊಡನೆ ಜೊತೆಗೂಡಿ ಅಧ್ಯಾತ್ಮವಿದ್ಯಾಪ್ರಚಾರರೂಪವಾದ ಚಟುವಟಿಕೆಗಳನ್ನು ನಡೆಯಿಸಿಕೊಂಡುಬರುತ್ತಿದೆ.

ಪ್ರತಿದಿನವೂ ಭಾಷ್ಯ ಪ್ರವಚನ, ಪುರಾಣಶ್ರವಣ, ಪೂಜೆ, ಭಜನೆ, ಶನಿವಾರ-ಭಾನುವಾರಗಳಲ್ಲಿ ವಿಶೇಷಪ್ರವಚನಗಳೂ ವರ್ಷದ ಕೆಲವು ಮುಖ್ಯಕಾಲಗಳಲ್ಲಿ ಅನುಷ್ಠಾನ- ಉತ್ಸವಗಳೂ ಕ್ರಮವಾಗಿ ಇಲ್ಲಿ ನಡೆಯುತ್ತಿವೆ. ಮಹಾಜನರ ಉಪಯೋಗಕ್ಕಾಗಿ ಗ್ರಂಥಭಂಡಾರ, ವಾಚನಾಲಯಗಳೂ ಇವೆ. ಗ್ರಂಥಪ್ರಕಟನೆಯ ಕಾರ್ಯವನ್ನೂ ಕೈಗೊಂಡು ಹಲವು ಅಧ್ಯಾತ್ಮಗ್ರಂಥಗಳನ್ನು ಹೊರತರಲಾಗಿದೆ. ಮಹಾಜನರು ಈ ಸತ್ಕಾರ್ಯಗಳಿಗೆ ತಮ್ಮಗಳ ಪ್ರೋತ್ಸಾಹವನ್ನು ನೀಡಿ ಭಾರತಸಂಸ್ಕೃತಿಯ ಉದ್ಧಾರಕ್ಕೆ ನೆರವಾಗಬೇಕೆಂದು ಕೋರಿದೆ.

ಇತಿ,

ತ್ಯಾಗರಾಜನಗರ,
ಬೆಂಗಳೂರು-28.

ಕೆ. ಜಿ. ಸುಬ್ರಾಯಶರ್ಮಾ,
ಕಾರ್ಯದರ್ಶಿ,
ಅಧ್ಯಾತ್ಮಪ್ರಕಾಶಶಾಖಾಕಾರ್ಯಾಲಯ.